# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 8 | Issue : 10 | Feb. 2026 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 8 | ಸಂಚಿಕೆ : 10 | ಫೆಬ್ರವರಿ 2026 | ಪುಟಗಳು : 32 | ₹ 20 ರೂ.





# ಸಮೃದ್ಧಿ ಭೈರವ ಭವನ



T.M. ರೋಡ್, ಚುಂಚನಹಳ್ಳಿ, ಶ್ರೀ ಆದಿಚುಂಚನಗಿರಿ ಕ್ಷೇತ್ರ




ಶ್ರೀ ಭೈರವೇಶ್ವರ ಸ್ವಾಮಿ ಭುಕ್ತಿ ಸೇವೆ, ಮದುವೆ, ನಾಮಕರಣ, ಆರತಕ್ಷತೆ,
ಭೀಗರ ಔತಣ, ಮುಂತಾದ ಶುಭ-ಸಮಾರಂಭಗಳಿಗೆ ಸಂಪರ್ಕಿಸಿ

**7795808178, 8722127146**



ಸಂಪ್ರೀತಿ - ಸಮೃದ್ಧಿ
ನಿಮ್ಮ ಮನ ಮನೆಗಳಿಗೆ...
ಮಾಸಿಕ

# ಸಂಪಾದಕೀಯ

**ಫೆಬ್ರವರಿ - 2026**
**ಸಂಪುಟ 8, ಸಂಚಿಕೆ 10**

ಸಂಪಾದಕರು
**ಡಾ|| ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/- |
| 05 ವರ್ಷಕ್ಕೆ | ರೂ.1000/- |
| 02 ವರ್ಷಕ್ಕೆ | ರೂ.500/- |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು
**ಸಂಪ್ರೀತಿ - ಸಮೃದ್ಧಿ**
ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ - 562 131.

**#66, ಸಂಪ್ರೀತಿ - ಸದನ ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ - 562 120 ಬೆಂಗಳೂರು ದಕ್ಷಿಣ ಜಿಲ್ಲೆ**

ಮುದ್ರಕರು
**ಕಂಪ್ಯೂಟರ್ ವರ್ಲ್ಡ್**
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು - 560 023.

ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com
8971608213

ಸಂಪ್ರೀತಿ - ಸಮೃದ್ಧಿ

**ಮನ ಏವ ಕಾರಣಂ ಬಂಧ ಮೋಕ್ಷಯೋ:**

ಈ ನಮ್ಮ ಮನಸ್ಸೇ ಬಂಧನಕ್ಕೂ-ಮೋಕ್ಷಕ್ಕೂ, ದುಃಖಕ್ಕೂ,ಸುಖಕ್ಕೂ ಕಾರಣವಾಗಿದೆ. ನಮ್ಮ ದೇಹಕ್ಕೆ ಇತಿ-ಮಿತಿ ಇದೆ. ಆದರೆ ನಮ್ಮ ಮನಸ್ಸಿನ ಸಾಮರ್ಥ್ಯಕ್ಕೆ ಇತಿ-ಮಿತಿ ಎಂಬುದಿಲ್ಲ. ಅದು ವಿಶ್ವವನ್ನು ವಿಶ್ವೇಶ್ವರನನ್ನು ಅರಿತು ಅನುಭವಿಸಿ ಆನಂದಿಸಬಲ್ಲದು. ಮನದ ಕ್ಷೇತ್ರ ಅಷ್ಟು ವಿಶಾಲ. ನಿಸರ್ಗ-ದೇವತೆಯು ನಮಗೆ ಕರುಣಿಸಿದ ಅಮೂಲ್ಯ ಸಂಪದವೇ ಈ ಮನಸ್ಸು. ಜಗದಲ್ಲಿ ಮನಸ್ಸು ಇಲ್ಲದವರೇ ಇಲ್ಲ. ಈ ಮನದಲ್ಲಿ ಹುದುಗಿರುವ ಶಕ್ತಿ ಸಾಮರ್ಥ್ಯಗಳನ್ನು ಹೊರ ಹೊಮ್ಮಿಸುವುದೇ ಸಾಧನೆಯಾಗಿದೆ. ಇಂಥ ಅದ್ಭುತ ಮನಸ್ಸನ್ನು ಬಳಸಿಕೊಂಡು ನಾವು ಈ ಜಗದಲ್ಲಿ ನೂರುಕಾಲ ಬಾಳಬೇಕಾಗಿದೆ. ನಿಸರ್ಗದ ವಿಶೇಷ ಕಾಣಿಕೆಯಾಗಿರುವ 'ಮನಸ್ಸನ್ನು' ಬಳಸುವ ಹದ ಯಾರಿಗೆ ತಿಳಿದಿದೆಯೋ ಅವರು ಸುಖಿಗಳು. ಈ ಮನದ ಬಳಕೆಯ ಜಾಣ್ಮೆ ಇಲ್ಲದವರೇ ದುಃಖಿಗಳು. ಈ ಮನಸ್ಸೇ ನಮಗೆ ನೂರುಕಾಲ ಬದುಕುವ ಒಲವನ್ನು ಬಲವನ್ನು ನೀಡುತ್ತದೆ. ಇಂಥ ಅಪರೂಪದ ಮನಸ್ಸನ್ನು ಕರುಣಿಸಿದ ದೇವರಿಗೆ ನಾವು ಸದಾ ಕೃತಜ್ಞರಾಗಿರಬೇಕು. ದೇವರು ವಿಶಾಲವಾದ ವಿಶ್ವವನ್ನು ನಿರ್ಮಿಸಿ ನಮ್ಮನ್ನಿಲ್ಲಿಗೆ ಕಳುಹಿಸಿದ, ಜೊತೆಗೆ ನಮಗೆ ಸಮರ್ಥವಾದ ದೇಹವನ್ನು ಸುಂದರವಾದ ಮನಸ್ಸನ್ನು ಕರುಣಿಸಿದ. ಇವೆರಡನ್ನು ಬಳಸಿಕೊಂಡು. ನಾವು ಈ ಪ್ರಪಂಚದಲ್ಲಿ ಸಂತಸದ ಹೂದೋಟವನ್ನೇ ಬೆಳೆಯಬಹುದು, ಪ್ರತಿಸ್ವರ್ಗವನ್ನು ಸೃಷ್ಟಿಸಬಹುದು. ಅಂಥದೊಂದು ಮಹತ್ಸಾಧನೆಯನ್ನು ಶಿವಶರಣ, ಒಕ್ಕಲಿಗರ ಮುದ್ದಯ್ಯನವರು ಒಂಬತ್ತು ನೂರುವರುಷಗಳ ಹಿಂದೆ ಮಾಡಿದರು.

ಅಂಗವೇ ಭೂಮಿಯಾಗಿ
ಲಿಂಗವೇ ಬೆಳೆಯಾಗಿ
ವಿಶ್ವಾಸವೆಂಬ ಬಿತ್ತು ಬಲಿದು
ಉಂಡು ಸುಖಿಯಾಗಿರಬೇಕೆಂದ
ಕಾಮ ಭೀಮ ಜೀವದನದ ಒಡೆಯ

"ಅಂಗವೆ ಭೂಮಿಯಾಗಿ' ಎಂದರೆ ಒಳಂಗ, ಅಂತರಂಗ ಅಥವಾ ಮನಸ್ಸನ್ನೇ ಕ್ಷೇತ್ರವನ್ನಾಗಿ ಮಾಡಿಕೊಂಡು ಎಂದರ್ಥ. ಲಿಂಗವೆ ಬೆಳೆಯಾಗಿ ಎಂದರೆ ದೇವರೇ ದೇವದರ್ಶನವೇ ದೇವಾನಂದ ಆತ್ಮಾನಂದ ಬ್ರಹ್ಮಾನಂದವೆ ಬೆಳೆ ಎಂದರ್ಥ. 'ವಿಶ್ವಾಸವೆಂಬ ಬಿತ್ತು ಬಲಿದು ಉಂಡು ಪರಮಸುಖಿಯಾದೆ' ಎಂದರೆ ದೈವೀಶ್ರದ್ಧೆ, ಆತ್ಮವಿಶ್ವಾಸವೆಂಬ ಬೀಜವೇ ಬೆಳೆದು ಆತ್ಮಾನಂದದ ಅಮೃತಫಲವನ್ನು ನೀಡಿತು. ಆ ಫಲವನ್ನುಂಡು ನಾನು ಅತ್ಯಂತ ಸುಖಿಯಾದೆ ಎಂದರ್ಥ.
ಕಾಮ ಭೀಮ ಜೀವದನದೊಡೆಯ' ಎಂದರೆ ಪ್ರಪಂಚದಲ್ಲಿ ಇರುವ ಎಲ್ಲ ಪ್ರಾಣಿಗಳ ಪಶುಗಳ ಒಡೆಯ, ಪಶುಪತಿ ಪರಮಾತ್ಮನೆಂದರ್ಥ.

ನಮ್ಮ ಮನಸ್ಸೇ, ದೇವರು ಕರುಣಿಸಿದ ವಿಶಾಲವಾದ ಅಷ್ಟೇ ಫಲವತ್ತಾದ ಭೂಮಿ, ಹೊರಗೆ ನಾವೆಲ್ಲರೂ ಬೇರೆ ಬೇರೆ ಉದ್ಯೋಗ ಮಾಡುತ್ತಿರಬಹುದು. ಆದರೆ ಅಂತರಂಗದಲ್ಲಿ ನಾವೆಲ್ಲರೂ ರೈತರೇ, ಕೃಷಿಕರೇ. ಹೊರಗಿನ ಭೂಮಿಯಲ್ಲಿ ದಾಯಾದಿಗಳು ಬಂಧು ಬಳಗದವರು ಯಾರಾದರೂ ಪಾಲು ಕೇಳಬಹುದು. ಆದರೆ ನಮ್ಮ ಅಂತರಂಗದಲ್ಲಿರುವ ಮನೋಭೂಮಿಗೆ ನಾವೇ ಒಡೆಯರು. ಅಲ್ಲಿ ಯಾರೂ ಎಂದೂ ಪಾಲು ಕೇಳುವುದಿಲ್ಲ. ॐ

# ಕೈಲಾಸ ವಾಸಿ ಶಿವನ ಪ್ರಿಯದಿನ

# ಮಹಾಶಿವರಾತ್ರಿ



(ಅಜ್ಞಾನ ಕಳೆದು ಸುಜ್ಞಾನ ಬೆಳಗಿಸುವಂತೆ ಶಿವನನ್ನು ಬೇಡುವ ಶುಭದಿನ. ಲಯಕರ್ತ ಪರಶಿವನ ಆರಾಧನೆ ಗೆ ಪ್ರಶಸ್ತ ವಾದ ದಿನವೇ ಮಹಾಶಿವರಾತ್ರಿ)

ಡಿ. ಜಿ. ಗಂಗಾಧರ,
ಶಿಕ್ಷಕರು ಹಾಗೂ ಹವ್ಯಾಸಿ ಬರಹಗಾರರು

ಮಹಾಶಿವರಾತ್ರಿ ಹಿಂದುಗಳ ಪವಿತ್ರ ಹಬ್ಬಗಳಲ್ಲೊಂದು. ಸಾಮಾನ್ಯ ವಾಗಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಶಿವರಾತ್ರಿ ಹಬ್ಬ ಬರುತ್ತದೆ. ಶಿವರಾತ್ರಿಯಂದು ಕೈಲಾಸ ವಾಸ ಪರಶಿವನನ್ನು ಕೋಟಿ ಕೋಟಿ ಜನರು ಭಜಿಸಿ ಪೂಜಿಸುತ್ತಾರೆ. ಶಿಶಿರ ಋತುವಿನ ಮಾಘ ಮಾಸದ ಕೃಷ್ಣ ಪಕ್ಷ ಬಹುಳ ಚತುರ್ದಶಿ ಯಂದು ಬರುವ ಶಿವರಾತ್ರಿಯ ದಿನ ಭಕ್ತಾದಿಗಳು ಶಂಭೋ ಶಂಕರನನ್ನು ನೆನೆದು, ಪುನೀತರಾಗುತ್ತಾರೆ.

ತನ್ನ ನಂಬಿ ಬಂದ ಭಕ್ತರ ಇಷ್ಟಾರ್ಥಗಳಿಗೆ ಎಂದಿಗೂ ನಿರಾಸೆ ಮಾಡದ ದಯಾಮಯಿ ಶಿವನಿಗೆ ಶಿವರಾತ್ರಿಯಂದು ದೇಶಾದ್ಯಂತ ವಿಶೇಷ ಪೂಜೆಗಳು ನೆರವೇರುತ್ತವೆ. ಇಡೀ ಭಾರತದಾದ್ಯಂತ ಬಹುತೇಕ ಎಲ್ಲಾ ಭಾಗಗಳಲ್ಲೂ ಆಚರಿಸುವ ಹಬ್ಬ ಇದು.

**ಮಹಾಶಿವರಾತ್ರಿಗೆ ತಳುಕು ಹಾಕಿಕೊಂಡಿರುವ ಪೌರಾಣಿಕ ಕಥೆಗಳು**

ಶಿವನನ್ನು ಪಡೆಯುವುದಕ್ಕಾಗಿ ಯತ್ನಿಸುತ್ತಿದ್ದ ಪಾರ್ವತಿಯ ತೀವ್ರ ತಪಸ್ಸಿಗೆ ಮೆಚ್ಚಿ, ಶಿವ ಪಾರ್ವತಿಯನ್ನು ವಿವಾಹವಾದ ದಿನವನ್ನೇ ಮಹಾಶಿವರಾತ್ರಿ ಎಂದು ಆಚರಣೆ ಮಾಡಲಾಗುತ್ತಿದೆ.

ಸಮುದ್ರ ಮಂಥನದಿಂದ ಬಂದ ವಿಷವನ್ನು ಶಿವನು ಕುಡಿದು ಜಗತ್ತನ್ನು ರಕ್ಷಿಸಿದ ದಿನ. ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರ ಮಂಥನ ನಡೆದು ವಿಷ ಉದ್ಭವವಾದಾಗ, ಅದನ್ನು ಶಿವ ಕುಡಿದ. ವಿಷ ಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎನ್ನುತ್ತದೆ ಶಿವಪುರಾಣದ ಇನ್ನೊಂದು ಮಹಿಮೆ.

ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ತುಂಬಿಸಿಕೊಂಡಿದ್ದ. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸುವಂತೆ ಶಿವನನ್ನು ಪ್ರಾರ್ಥಿಸಿದ. ಆತನ ಭಕ್ತಿಗೆ ಮೆಚ್ಚಿ ಶಿವ ಗಂಗೆಯನ್ನು ಹರಿಯಬಿಟ್ಟಿದ್ದು ಇದೇ ದಿನ ಎನ್ನುತ್ತದೆ ಪುರಾಣ.

**ಶಿವನು ಲಿಂಗರೂಪದಲ್ಲಿ ಪ್ರಥಮ ಬಾರಿಗೆ ದರ್ಶನ ನೀಡಿದ ದಿನವೆಂದು ನಂಬಲಾಗಿದೆ;**

ಮಹಾಶಿವರಾತ್ರಿಯನ್ನು ಶಿವನ ಸೃಷ್ಟಿ, ಸ್ಥಿತಿ ಲಯಗಳ ತಾಂಡವ ನೃತ್ಯ ಎಂದೂ ಹೇಳಲಾಗುತ್ತದೆ. ಅಂದರೆ ಶಿವನು ತಾಂಡವ ನೃತ್ಯ ಮಾಡಿದ ದಿನವೆಂದು ಸಹ ಹೇಳಲಾಗುತ್ತದೆ.

ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂಬುದು ಪ್ರತೀತಿ.

ಹೀಗೆ ಅಜ್ಞಾನವನ್ನು ಜ್ಞಾನದಿಂದ ಗೆಲ್ಲುವ, ಆತ್ಮಾವಲೋಕನ ಮತ್ತು ಸ್ವಯಂ ಸಾಕ್ಷಾತ್ಕಾರದ ದಿನವೆಂದು ಪರಿಗಣಿಸಲಾಗುತ್ತದೆ.

## ಶಿವರಾತ್ರಿಯ ಆಚರಣೆ ಹೇಗೆ?

- ಸೂರ್ಯೋದಯಕ್ಕೆ ಮುನ್ನ ಸ್ನಾನ ಮಾಡಿ, ಶುಭ್ರವಾದ ವಸ್ತ್ರ ಧರಿಸಬೇಕು.
- ಶಿವನ ದೇಗುಲಗಳಿಗೆ ಭೇಟಿ ನೀಡಬೇಕು.
- ಶಿವಲಿಂಗಕ್ಕೆ ಹಾಲು, ನೀರು, ಶ್ರೀಗಂಧ, ತುಪ್ಪ ಮತ್ತು ಬಿಲ್ವಪತ್ರೆ ಅರ್ಪಿಸಬೇಕು.
- ಉಪವಾಸವಿದ್ದು, ರಾತ್ರಿ ಜಾಗರಣೆ ಮಾಡಿ, ಶಿವ ಮಂತ್ರ ಪಠಿಸಬೇಕು. ಜಾಗರಣೆ ಎಂದರೆ ಮೋಜು ಮಸ್ತಿಗಳಲ್ಲ, ಬದಲಾಗಿ ಧ್ಯಾನ ಮತ್ತು ಪ್ರಾರ್ಥನೆಯ ಮೂಲಕ ಮನಸ್ಸನ್ನು ಶಿವನ ಕಡೆಗೆ ಕೇಂದ್ರೀಕರಿಸುವುದು
- ಎಲ್ಲೆಡೆ ಶಿವನನ್ನೇ ಕಾಣಬೇಕು, ಆತ್ಮವನ್ನು ಶಿವನಿಗೆ ಸಮರ್ಪಿಸಬೇಕು.

## ಶಿವರಾತ್ರಿಯಂದು ಜಾಗರಣೆ ಪದ್ದತಿ ರೂಢಿಗೆ ಬಂದದ್ದು

ಕೈಲಾಸವಾಸಿ ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯಂದು ತನ್ನನ್ನು ಪೂಜಿಸುವ ಭಕ್ತರಿಗೆ ತಾನು ವಿಶೇಷವಾಗಿ ಅನುಗ್ರಹ ನೀಡುವುದಾಗಿ ಸ್ವತ: ಶಿವನೇ ಪಾರ್ವತಿಯಲ್ಲಿ ಅರುಹಿದ್ದಾನೆ ಎನ್ನುತ್ತದೆ ಶಿವಪುರಾಣ. ಮಾಘ ಬಹುಳ ಚತುರ್ದಶಿಯ ರಾತ್ರಿಯೇ ಶಿವ ಪಾರ್ವತಿಯನ್ನು ವರಿಸಿದ್ದನಂತೆ. ಹೀಗಾಗಿ ಅಂದು ರಾತ್ರಿ ದೇವಾನು ದೇವತೆಗಳೆಲ್ಲರೂ ಜಾಗರಣೆ ಮಾಡಿ, ಗಿರಿಜಾ ಕಲ್ಯಾಣ ವೀಕ್ಷಿಸಿ, ಶಿವಪಾರ್ವತಿಯರಿಬ್ಬರನ್ನೂ ಪೂಜಿಸಿದರಂತೆ. ಹೀಗಾಗಿಯೇ ಜಾಗರಣೆ ಪದ್ಧತಿ ಆಚರಣೆಗೆ ಬಂದಿದೆ ಎನ್ನಲಾಗುತ್ತದೆ.

## ಶಿವರಾತ್ರಿಯಂದು ಮಾಡಬೇಕಾದ ಮೂರು ಕರ್ತವ್ಯಗಳು

ಶಿವನ ಭಕ್ತರು ಶಿವರಾತ್ರಿಯಂದು ಈ ಕೆಳಗಿನ ಮೂರು ನಿಯಮಗಳನ್ನು ಪಾಲಿಸಿದರೆ ಶ್ರೇಷ್ಠ.

**1: ಶಿವಾಭಿಷೇಕಾದಿ ಪೂಜೆ**

**2: ಜಾಗರಣೆ**

**3: ಉಪವಾಸ**

ಈ ಮೂರರಿಂದ ಪರಮಶಿವನು ಸಂತುಷ್ಟನಾಗಿ ತನ್ನ ಭಕ್ತರಿಗೆ ವರಪ್ರದನಾಗುತ್ತಾನೆ.

## ರಾತ್ರಿ ಇಡೀ ಜಾಗರಣೆ ಏಕೆ ಮಾಡಬೇಕು?

ಪ್ರತಿ ಸಂವತ್ಸರದಲ್ಲಿ, ಶಿಶಿರ ಋತುವಿನ ಮಾಘ ಮಾಸದ ಕೃಷ್ಣಪಕ್ಷ ಚತುರ್ದಶಿಯಂದು, ರಾತ್ರಿ ವೇಳೆಯಲ್ಲಿ ಶಿವ ಪಾರ್ವತಿ ಜೊತೆಯಲ್ಲಿ ಭೂಮಿಯಲ್ಲಿ ಸಂಚರಿಸುತ್ತ ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣಗೊಳ್ಳುತ್ತಾನೆ. ಆ ಸಮಯದಲ್ಲಿ ಶಿವರಾತ್ರಿಯಂದು ರಾತ್ರಿಯ ವೇಳೆಯಲ್ಲಿ ತನ್ನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ.

## ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ.

ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.



ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ.

## ಮಹಾ ಶಿವರಾತ್ರಿ ಆಚರಣೆಯ ವೈಜ್ಞಾನಿಕತೆ

ಇದು ಚಳಿಗಾಲದಿಂದ ಬೇಸಿಗೆ ಕಾಲಕ್ಕೆ ಪರಿವರ್ತನೆಯಾಗುವ ಸಮಯ, ಸೂರ್ಯನು ಕ್ಷೀಣಿಸಿ ಚಂದ್ರನು ಬಲಹೀನನಾಗುವ ಈ ದಿನದಂದು ದೇಹದ ವಾತ ಅಂಶವನ್ನು ಸಮತೋಲನಗೊಳಿಸಲು ಉಪವಾಸ, ಜಾಗರಣೆ ಸಹಕಾರಿ, ಇದರಿಂದ ನರಮಂಡಲವು ಶುದ್ಧಗೊಂಡು ಶಕ್ತಿಯು ಹೆಚ್ಚುತ್ತದೆ; ಬಿಲ್ವಪತ್ರೆ ಮತ್ತು ನೀರಿನ ಅಭಿಷೇಕವು ದೇಹಕ್ಕೆ ಉಸಿರಾಟದ ತೊಂದರೆ ನಿವಾರಣೆ ಹಾಗೂ ಶಕ್ತಿ ಪ್ರವಹಿಸಲು ನೆರವಾಗುತ್ತದೆ ಎಂದು ನಂಬಲಾಗಿದೆ. ಫಾಲ್ಗುಣ ಮಾಸದ ಕೃಷ್ಣ ಪಕ್ಷದ 14ನೇ ದಿನದಂದು ಬರುವ ಈ ರಾತ್ರಿಯಲ್ಲಿ ಗ್ರಹಗಳ ಸ್ಥಾನದಿಂದಾಗಿ ಮಾನವನ ದೇಹದಲ್ಲಿ ಶಕ್ತಿಯ ಉಲ್ಬಣ ಉಂಟಾಗುತ್ತದೆ.ಉಪವಾಸವು ದೇಹದ ಜೀವಕೋಶಗಳ ದುರಸ್ತಿ ಮತ್ತು ಚಯಾಪಚಯವನ್ನು ಹೆಚ್ಚಿಸುತ್ತದೆ.ರಾತ್ರಿಯಿಡೀ ಎಚ್ಚರವಿರುವುದರಿಂದ ದೇಹದ ನರಮಂಡಲವು ನೆಲಕ್ಕೆ ಲಂಬವಾಗಿ ಇರುತ್ತದೆ, ಇದು ವಾತದ ಚಲನೆಗೆ ಸಹಕಾರಿ. ಓಂ ನಮಃ ಶಿವಾಯ'ದಂತಹ ಮಂತ್ರಗಳ ಕಂಪನಗಳು ನರಮಂಡಲವನ್ನು ಶಾಂತಗೊಳಿಸಿ ಒತ್ತಡವನ್ನು ಕಡಿಮೆ ಮಾಡುತ್ತವೆ. ಮಹಾ ಶಿವರಾತ್ರಿಯ ಆಚರಣೆಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ, ಅವು ನಮ್ಮ ದೇಹ ಮತ್ತು ಮನಸ್ಸನ್ನು ಶುದ್ಧೀಕರಿಸುವ ವೈಜ್ಞಾನಿಕ ಮತ್ತು ಯೋಗಿಕ ವಿಧಾನಗಳಾಗಿವೆ.

## ಸಕಲ ಜೀವರಾಶಿಗಳನ್ನು ಪೊರೆಯುವ ಶಿವ

ಶಿವನು ಎಲ್ಲಾ ಆಡಂಬರಗಳಿಂದ ಮುಕ್ತ. ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ. ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಶ್ಕಲ್ಮಶ ಮತ್ತು ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸ ಭರಿತರಾಗಿ ಶಿವರಾತ್ರಿ ಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ.


## ಸರ್ವಂ ಶಿವಮಯಂ

ಎಲ್ಲ ಆಡಂಬರಗಳಿಂದ ಮುಕ್ತರಾಗಿ, ಸರಳ ಮನಸ್ಸಿನಿಂದ ಪರಶಿವನನ್ನು ನೆನದು, ಭಜಿಸಿ ಶಿವರಾತ್ರಿಯನ್ನು ಆಚರಿಸೋಣ... ಮಹಾಶಿವರಾತ್ರಿ ಅತ್ಯಂತ ಶುಭಪ್ರದಾಯಕವಾಗಿದ್ದು ಭಕ್ತಿಯಿಂದ ಆಚರಿಸುವ ಎಲ್ಲಾ ಆಚರಣೆಗಳು ಶಿವನಿಗೆ ಸಂಪ್ರೀತಿಯನ್ನು ಉಂಟು ಮಾಡಿ, ಶಿವನು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆ. ಎಲ್ಲರೂ ಶಿವನನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸೋಣ---- ಶಿವಧ್ಯಾನದಲ್ಲಿ ಸದಾ ಮುಳುಗೋಣ.

## ದೊಡ್ಡ ಸೋಮನಹಳ್ಳಿಯ ಬ್ರಹ್ಮಲಿಂಗೇಶ್ವರ ದೇಗುಲದಲ್ಲಿ ಸಂಭ್ರಮದ ಶಿವರಾತ್ರಿ :

ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ವಿಶೇಷತೆಯುಳ್ಳ ಗ್ರಾಮ ದೊಡ್ಡ ಸೋಮನಹಳ್ಳಿ. ಇಲ್ಲಿ ತೀರ ಅಪರೂಪದ, ಪುರಾಣಪ್ರಸಿದ್ಧವಾದ ಬ್ರಹ್ಮಲಿಂಗೇಶ್ವರ ದೇವಾಲಯವಿದೆ. ಹಿಂದೆ ಈ ದೇಗುಲದಲ್ಲಿ ಅಕ್ಷರಕ್ರಾಂತಿ ನಡೆಯುತ್ತಿತ್ತು ಎಂಬ ಬಲವಾದ ನಂಬಿಕೆ ಇದೆ. ಇಲ್ಲಿಗೆ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಹಾಗೂ ಸುತ್ತಮುತ್ತಲ ಹಳ್ಳಿಗಳಿಂದ ಭಕ್ತರು ಮಹಾಶಿವರಾತ್ರಿಯಂದು ಭಕ್ತಿ ಭಾವದಿಂದ ಬಂದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಜೊತೆಗೆ ಶಿವ ಧ್ಯಾನ, ಶಿವನಾಮಸ್ಮರಣೆ ಮಾಡಿ ಪುನೀತರಾಗುತ್ತಾರೆ.

ಬ್ರಹ್ಮಲಿಂಗೇಶ್ವರ ಹಾಗೂ ಅಟ್ಟಿ ಮಾರಮ್ಮ ದೇವಾಲಯದಲ್ಲಿ ಶಿವರಾತ್ರಿಯ ಮುಂಜಾನೆಯಂದು ಅರ್ಚಕರು ವಿವಿಧ ಅಭಿಷೇಕಗಳನ್ನು ನಡೆಸಿ, ಶಿವಲಿಂಗಕ್ಕೆ ವಿಶೇಷವಾದ ಅಲಂಕಾರವನ್ನು ಮಾಡಿ ನಂತರ ಮಹಾಮಂಗಳಾರತಿ ಮಾಡುತ್ತಾರೆ. ಶಿವ ಭಕ್ತರು ರಾತ್ರಿಯಿಡೀ ಜಾಗರಣೆ ಮಾಡಿ ಶಿವನನ್ನು ಭಕ್ತಿ ಭಾವದಿಂದ ಸ್ಮರಿಸುತ್ತಾರೆ. ಭಕ್ತರು ಸರತಿಯ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡುತ್ತಾರೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಪ್ರತಿವರ್ಷ ದೇವಸ್ಥಾನದ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗುತ್ತದೆ. ॐ








ಹಿಂದೂ ಆಧ್ಯಾತ್ಮಿಕ ನಾಯಕ ಮತ್ತು 19ನೇ ಶತಮಾನದ ಸಾಮಾಜಿಕ ಸುಧಾರಕ ಮಹರ್ಷಿ

# ಸ್ವಾಮಿ ದಯಾನಂದ ಸರಸ್ವತಿ ಜಯಂತಿ

ಮಹರ್ಷಿ ಸ್ವಾಮಿ ದಯಾನಂದ ಸರಸ್ವತಿ ಹಿಂದೂ ಆಧ್ಯಾತ್ಮಿಕ ನಾಯಕ ಮತ್ತು 19 ನೇ ಶತಮಾನದ ಸಾಮಾಜಿಕ ಸುಧಾರಕರಾಗಿದ್ದರು, ಹಿಂದೂ ಸುಧಾರಣಾ ಸಂಘಟನೆಯ ಆರ್ಯ ಸಮಾಜದ ಸ್ಥಾಪಕರಾಗಿದ್ದರು. ಸ್ವಾಮಿ ದಯಾನಂದರು ಫೆಬ್ರವರಿ 12, 1824 ರಂದು ಪಶ್ಚಿಮ ಭಾರತದ ರಾಜ್ಯವಾದ ತಂಕಾರದಲ್ಲಿ ಜನಿಸಿದರು. ಹಿಂದೂಧರ್ಮವು ತತ್ವಶಾಸ್ತ್ರ ಮತ್ತು ದೇವತಾಶಾಸ್ತ್ರದ ವಿವಿಧ ಶಾಲೆಗಳ ನಡುವೆ ವಿಭಜನೆಯಾದಾಗ, ಸ್ವಾಮಿ ದಯಾನಂದರು "ವೇದಗಳ ದೇವರ" ದಲ್ಲಿ ಮಾತನಾಡುವ ಜ್ಞಾನ ಮತ್ತು ಸತ್ಯದ ಅತ್ಯಂತ ಅಧಿಕೃತ ಭಂಡಾರ ಎಂದು ಪರಿಗಣಿಸಿದಾಗ ವೇದಗಳಿಗೆ ಹಿಂದಿರುಗಿದರು. ವೇದದ ಜ್ಞಾನವನ್ನು ಪುನಃ ಶಕ್ತಿಯುತಗೊಳಿಸಲು ಮತ್ತು ನಾಲ್ಕು ವೇದಗಳಾದ ಋಗ್ವೇದ, ಯಜುರ್ ವೇದ, ಸಾಮ ವೇದ ಮತ್ತು ಅಥರ್ವ ವೇದ – ಸ್ವಾಮಿ ದಯಾನಂದರು ನಮ್ಮ ಹಲವಾರು ಅರಿವಿನ ಪುಸ್ತಕಗಳನ್ನು ಬರೆದರು ಮತ್ತು ಪ್ರಕಟಿಸಿದರು, ಅವುಗಳೆಂದರೆ ಸತ್ಯಾರ್ಥ ಪ್ರಕಾಶ್, ರಿಗ್– ವೇದಾದಿ, ಭಾಶ್ಯ–ಭೂಮಿಕ ಮತ್ತು ಸಂಸ್ಕಾರ ವಿಧಿ.

## ಗೃಹತ್ಯಾಗ

ಸಂಸಾರ ಬೇಡ ಎಂಬ ಭಾವನೆ ಮೂಲಶಂಕರನಲ್ಲಿ ಬೆಳೆಯತೊಡಗಿತ್ತು. ಜೀವನ ಎಂದರೇನು, ಸಾವು ಎಂದರೇನು ಎಂದು ಯಾರಾದರೊಬ್ಬ ಪೂರ್ಣಸಿದ್ಧ ಯೋಗಿಯಿಂದಲೇ ತಿಳಿಯಬೇಕು ಎನ್ನಿಸಿತು. ಆದ್ದರಿಂದ ಮೂಲಶಂಕರನು ಮನೆಯನ್ನು ಬಿಟ್ಟು ಯೋಗ್ಯ ಗುರುವನ್ನು ಹುಡುಕುತ್ತ ಹೋಗಬೇಕೆಂದು ನಿರ್ಧರಿಸಿದ್ದನು. ಮಗನಲ್ಲಿ ಬೆಳೆಯುತ್ತಿರುವ ವೈರಾಗ್ಯವನ್ನು ಕಂಡು ಎಲ್ಲಿ ಈತನು ಸಂನ್ಯಾಸಿಯಾಗಿ ಮನೆ ಬಿಟ್ಟು ಹೋಗುವನೋ ಎಂದು ತಂದೆ ತಾಯಿಗಳು ಹೆದರಿದರು. ಶೀಘ್ರವೇ ಈತನ ಮದುವೆ ಮಾಡಲು ನಿರ್ಧರಿಸಿದರು. ಕನ್ಯೆಯೂ ಗೊತ್ತಾಯಿತು. ಮದುವೆಯ ಸಿದ್ಧತೆಗಳು ಭರದಿಂದ ಸಾಗತೊಡಗಿದವು. ಮೂಲಶಂಕರನು ಮಾತ್ರ ಯಾವುದನ್ನೂ ವಿರೊಧಿಸಲಿಲ್ಲ. ಇದರಿಂದ ಮಗನಿಗೆ ಮದುವೆಯಾಗುವ ಇಚ್ಛೆ ಇದೆ ಎಂದುಕೊಂಡು ತಂದೆತಾಯಿಗಳು ಸಂತೋಷದಿಂದಿದ್ದರು. ಆದರೆ ಸಂಸಾರ ತ್ಯಾಗದ ನಿರ್ಧಾರ ಮೂಲಶಂಕರನಲ್ಲಿ ಮಾತ್ರ ಅಚಲವಾಗಿತ್ತು.

## ಗುರುವಿಗಾಗಿ ಅಲೆದಾಟ

ಮನೆಯಿಂದ ಹೊರ ಬಿದ್ದ ಮೂಲಶಂಕರನು ಗುರುವನ್ನು ಹುಡುಕುತ್ತಾ ಅಹಮದಾಬಾದ್, ಬರೋಡಾ, ಹರಿದ್ವಾರ, ಕಾನಪೂರ, ಕಾಶಿ ಮುಂತಾದ ನಗರಗಳನ್ನು ಸುತ್ತಿದನು. ಪರ್ವತ ಪ್ರದೇಶದ ಕಾಡು ಮೇಡುಗಳಲ್ಲಿ ಗುರುವಿಗಾಗಿ

ಅಲೆದಾಡಿದನು. ಎಲ್ಲಿಯೂ ಆತನಿಗೆ ಯೋಗ್ಯ ಗುರುವಿನ ದರ್ಶನವಾಗಲಿಲ್ಲ. ಇದೇ ಅವಧಿಯಲ್ಲಿ ಮೂಲ ಶಂಕರನು ಪೂರ್ಣಾನಂದನೆಂಬ ಘನ ವಿದ್ವಾಂಸನಾದ ಸಂನ್ಯಾಸಿಯಿಂದ ಸಂನ್ಯಾಸ ದೀಕ್ಷೆ ಪಡೆದು ಸ್ವಾಮಿದಯಾನಂದ ಸರಸ್ವತಿಯಾದ. ಹಿಮಪರ್ವತದ ಉನ್ನತ ಪ್ರಾಂತದಲ್ಲಿ ಯೋಗಿಗಳಿಗಾಗಿ ಅಲೆದಾಡುವಾಗ ದಯಾನಂದರು ತಮ್ಮ ಜೀವನವನ್ನು ಅನೇಕ ಸಲ ಗಂಡಾಂತರಕ್ಕೊಡ್ಡಬೇಕಾಯಿತು. ಹಿಂಸ್ರಪಶುಗಳಿಂದ ತುಂಬಿದ ಭೀಷಣ ಕಾಡುಗಳಲ್ಲಿ ರಾತ್ರಿ ಹಗಲೆನ್ನದೇ ಸಂಚರಿಸಬೇಕಾಯಿತು. ಹತ್ತು ವರ್ಷ ಅಲೆದಾಡಿದರೂ ದಯಾನಂದರಿಗೆ ಯೋಗ್ಯ ಗುರುವಿನ ದರ್ಶನವಾಗಲಿಲ್ಲ. ಇದರಿಂದ ಅವರಿಗೆ ತುಂಬಾ ನಿರಾಶೆಯಾಯಿತು. ಹಾರಿ ಪ್ರಾಣ ಕಳೆದುಕೊಳ್ಳಲು ಪರ್ವತ ಶಿಖರದ ಕೊಡುಗಲ್ಲೊಂದನ್ನು ಏರಿ ನಿಂತರು. ಇನ್ನೇನು ಹಾರಿಕೊಳ್ಳಬೇಕು. ಅಷ್ಟರಲ್ಲಿ ಅವರ ಮನಸ್ಸು, "ನೀನು ಮನೆಯನ್ನು ಬಿಟ್ಟು ಬಂದುದು ಈ ರೀತಿಯಾಗಿ ಹೇಡಿಯಂತೆ ಸಾಯುವುದಕ್ಕಾಗಿಯೇ? ಸಾವನ್ನು ಮೆಟ್ಟಿ ನಿಲ್ಲುವುದಕ್ಕೆ, ಜ್ಞಾನಿಯಾಗುವುದಕ್ಕೆ" ಎಂದು ನುಡಿಯಿತು. ಇದರಿಂದ ದಯಾನಂದರಿಗೆ ಹೊಸ ಶಕ್ತಿ ಬಂದಂತಾಗಿ ಯೋಗ್ಯ ಗುರುವನ್ನು ಹುಡುಕಿಯೇ ತಿರುವ ದೃಢ ನಿರ್ಧಾರದಿಂದ ಕೋಡುಗಲ್ಲನು ಇಳಿದು ಬಂದರು.

ನರ್ಮದಾ ನದಿಯ ಉಗಮಸ್ಥಾನದ ದಟ್ಟವಾದ ಅಡವಿಗಳಲ್ಲಿ ಪೂರ್ಣಸಿದ್ಧರಾದ ಯೋಗಿ ಜನರಿದ್ದಾರೆಂದು ತಿಳಿದುಬಂದು. ದಯಾನಂದರು ನೂರಾರು ಮೈಲಿಯ ದೂರವನ್ನು ಲೆಕ್ಕಿಸದೇ ದಕ್ಷಿಣಾಭಿಮುಖವಾಗಿ ನಡೆದೇ ಬಿಟ್ಟರು. ನರ್ಮದಾ ನದಿಯನ್ನು ಸಮೀಪಿಸುತ್ತಿರುವಾಗ ಅಲ್ಲೊಂದು ವನದಲ್ಲಿ ದಯಾನಂದರಿಗೆ ಪೂರ್ಣಾಶ್ರಮ ಸ್ವಾಮಿ ಎಂಬ ಸಾಧುವಿನ ದರ್ಶನವಾಯಿತು. ಅವರು ದಯಾನಂದರ ಅಲೆದಾಟದ ಕಥೆಯನ್ನು ಕೇಳಿ ಸಂತೋಷಗೊಂಡು, ಕೊನೆಗೆ, ದಯಾನಂದಜೀ, ನಿಮ್ಮ ಬಯಕೆಯನ್ನು ಈಡೇರಿಸುವ ಯೋಗ್ಯತೆ ಈ ಲೋಕದಲ್ಲಿ ವಿರಜಾನಂದ ದಂಡೀಶರಿಗೆ ಮಾತ್ರ ಇದೆ. ಅವರು ಮಥುರಾ ನಗರದಲ್ಲಿದ್ದಾರೆ" ಎಂದರು. ದಯಾನಂದರಿಗೆ ಆಶಾಕಿರಣವೊಂದು ಮಿನುಗಿತು. ತಡಮಾಡದೇ ಮಥುರಾ ನಗರಿಯತ್ತ ಹೊರಟರು. 1860ನೇ ಇಸವಿಯ ನವೆಂಬರ್ ಹದಿನಾಲ್ಕರಂದು ಮಥುರಾ ನಗರವನ್ನು ತಲುಪಿದರು.

## ರಾಷ್ಟ್ರಭಾಷೆಯ ಆದ್ಯ ಪ್ರವರ್ತಕ

ಭಾಷೆಯ ಸಮಾಜವನ್ನು ಒಂದು ಗೂಡಿಸುವ ಒಳ್ಳೆಯ ಸಾಧನೆವೆಂಬುವುದು ಸ್ವಾಮಿ ದಯಾನಂದರ ಖಚಿತ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಅವರು ಹಿಂದಿಗೆ ರಾಷ್ಟ್ರ ಭಾಷೆಯ ಸ್ಥಾನವನ್ನು ಕೊಡಬೇಕು ಎಂದು ಅಭಿಪ್ರಾಯಪಟ್ಟರು. ದಯಾನಂದರು ಗುಜರಾತ್ ಪ್ರಾಂತದಲ್ಲಿ ಜನಿಸಿದ್ದರು. ಗುಜರಾತಿ ಭಾಷೆಯಲ್ಲಿ ಅವರಿಗೆ ಒಳ್ಳೆಯ ಪಾಂಡಿತ್ಯವೂ ಇತ್ತು. ಆದರೂ ಅವರು ಗುಜರಾತಿನಲ್ಲಿಯೂ ಕೂಡ ಹಿಂದಿಯಲ್ಲಿಯೇ ಉಪನ್ಯಾಸವನ್ನು ಕೊಡುತ್ತಿದ್ದರು. ತಮ್ಮ ಎಲ್ಲ ಗ್ರಂಥಗಳನ್ನು ಹಿಂದಿಯಲ್ಲಿಯೇ ರಚಿಸಿದರು.

## ಸ್ವಾಮಿ ದಯಾನಂದರ ಸಂದೇಶ

1. ಸ್ವಾಮಿ ದಯಾನಂದರು ಏಪ್ರಿಲ್ 7,1875 ರಲ್ಲಿ ಮುಂಬೈಯಲ್ಲಿ ಆರ್ಯ ಸಮಾಜ ಎಂಬ ಹಿಂದೂ ಸುಧಾರಣಾ ಸಂಘಟನೆಯನ್ನು ಸ್ಥಾಪಿಸಿದರು ಮತ್ತು ಹಿಂದೂ ಧರ್ಮದಿಂದ ಭಿನ್ನವಾದ 10 ತತ್ವಗಳನ್ನು ರಚಿಸಿದರು, ಆದರೆ ವೇದಗಳನ್ನು ಆಧರಿಸಿದ್ದರು. ಮಾನವನ ಜನಾಂಗದ ಭೌತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳ ಮೂಲಕ ವ್ಯಕ್ತಿ ಮತ್ತು ಸಮಾಜವನ್ನು ಮುಂದುವರಿಸುವ ಗುರಿಯನ್ನು ಈ ತತ್ವಗಳು ಹೊಂದಿವೆ.

2. ಪ್ರಾಚೀನ ವೇದಗಳ ಬೋಧನೆಗಳನ್ನು ಪುನರ್ ಸ್ಥಾಪಿಸಲು ಅವರ ಗುರಿ ಹೊಸ ಧರ್ಮವನ್ನು ಕಂಡುಕೊಳ್ಳುವುದು ಅಲ್ಲ. ಸತ್ಯಾರ್ಥ ಪ್ರಕಾಶ್ನಲ್ಲಿ ಹೇಳಿದಂತೆ, ಸುಪ್ರೀಂ ಸತ್ಯದ ಸ್ವೀಕಾರ ಮತ್ತು ವಿಶ್ಲೇಷಣಾತ್ಮಕ ಚಿಂತನೆಯ ಮೂಲಕ ಸುಳ್ಳುತನವನ್ನು ತಿರಸ್ಕರಿಸುವ ಮೂಲಕ ಮಾನವಕುಲದ ನಿಜವಾದ ಬೆಳವಣಿಗೆಗೆ ಅವರು ಬಯಸಿದ್ದರು.

## ಆರ್ಯ ಸಮಾಜದ

19 ನೇ ಶತಮಾನದ ಭಾರತದಲ್ಲಿ ಸ್ವಾಮಿ ದಯಾನಂದರಿಂದ ಆರ್ಯ ಸಮಾಜವನ್ನು ಸ್ಥಾಪಿಸಲಾಯಿತು. ಇಂದು ಇದು ಹಿಂದೂ ಧರ್ಮದ ಮೂಲದ ನಿಜವಾದ ವೈದಿಕ ಧರ್ಮವನ್ನು ಬೋಧಿಸುವ ಒಂದು ಜಾಗತಿಕ ಸಂಘಟನೆಯಾಗಿದೆ. ಹಿಂದೂ ಧರ್ಮದೊಳಗೆ ಸುಧಾರಣಾ ಚಳವಳಿಯಿಂದ ಹುಟ್ಟಿದ ಸಾಮಾಜಿಕ–ಸಾಂಸ್ಕೃತಿಕ ಸಂಘಟನೆ ಎಂದು ಆರ್ಯ ಸಮಾಜವನ್ನು ಅತ್ಯುತ್ತಮವಾಗಿ ಹೇಳಬಹುದು. ಇದು "ಮೂಢನಂಬಿಕೆ, ಸಂಪ್ರದಾಯ ಮತ್ತು ಸಮಾಜದ ಸಾಮಾಜಿಕ ದುಷ್ಪರಿಣಾಮಗಳನ್ನು ತೆಗೆದುಹಾಕುವುದಕ್ಕೆ ಮೀಸಲಾಗಿರುವ ಪಂಥೀಯವಲ್ಲದ ಅಧಿಕೃತ ಹಿಂದೂ–ವೈದಿಕ ಧಾರ್ಮಿಕ ಸಂಸ್ಥೆಯಾಗಿದೆ" ಮತ್ತು ಇದರ ಉದ್ದೇಶವು "ಅದರ ಸದಸ್ಯರ ಜೀವನವನ್ನು ಮತ್ತು ಎಲ್ಲಾ ಇತರರನ್ನು ವೇದಗಳ ಸಂದೇಶದ ಪ್ರಕಾರ ಉಲ್ಲೇಖಿಸಿ ಸಮಯ ಮತ್ತು ಸ್ಥಳದ ಸಂದರ್ಭಗಳಿಗೆ, ಆರ್ಯ ಸಮಾಜವು ಸ್ವಯಂಪ್ರೇರಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ, ಅದರಲ್ಲೂ ವಿಶೇಷವಾಗಿ ಶಿಕ್ಷಣ ಕ್ಷೇತ್ರಗಳಲ್ಲಿ ಮತ್ತು ಅದರ ಸಾರ್ವತ್ರಿಕ ಮೌಲ್ಯಗಳ ಆಧಾರದ ಮೇಲೆ ಭಾರತದಾದ್ಯಂತ ಹಲವಾರು ಶಾಲೆಗಳು ಮತ್ತು ಕಾಲೇಜುಗಳನ್ನು ತೆರೆದಿದೆ. ಆಸ್ಟ್ರೇಲಿಯಾ, ಬಾಲಿ, ಕೆನಡಾ, ಫಿಜಿ, ಗಯಾನಾ, ಇಂಡೋನೇಷಿಯಾ, ಮಾರಿಷಸ್, ಮ್ಯಾನ್ಮಾರ್, ಕೀನ್ಯಾ, ಸಿಂಗಪೂರ್, ದಕ್ಷಿಣ ಆಫ್ರಿಕಾ, ಸುರಿನಾಮ್, ಥೈಲ್ಯಾಂಡ್, ಟ್ರಿನಿಡಾಡ್ ಮತ್ತು ಟೊಬಾಗೊ, ಯುಕೆ, ಮತ್ತು ಯುನೈಟೆಡ್ ಸ್ಟೇಟ್ಸ್ ಸೇರಿದಂತೆ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಆರ್ಯ ಸಮಾಜ ಸಮುದಾಯವು ಪ್ರಚಲಿತವಾಗಿದೆ.

## ಆರ್ಯ ಸಮಾಜದ ತತ್ವಗಳು

1. ಎಲ್ಲಾ ನೈಜ ಜ್ಞಾನ ಮತ್ತು ಜ್ಞಾನದ ಮೂಲಕ ತಿಳಿದುಬಂದ ಎಲ್ಲದಕ್ಕೂ ಸಮರ್ಥವಾದ ಕಾರಣ ದೇವರು.
2. ದೇವರು ಅಸ್ತಿತ್ವದಲ್ಲಿದೆ, ಬುದ್ಧಿವಂತ ಮತ್ತು ಆನಂದದಾಯಕ, ಅವರು ರೂಪವಿಲ್ಲದ, ಸರ್ವಜ್ಞ, ಕೇವಲ, ಕರುಣಾಮಯ, ಹುಟ್ಟಲ್ಲಿಲ್ಲದ, ಅಂತ್ಯವಿಲ್ಲದ, ಬದಲಾಯಿಸಲಾಗದ, ಆರಂಭದಲ್ಲಿ ಕಡಿಮೆ, ಅಸಮಂಜಸ, ಎಲ್ಲರ ಬೆಂಬಲ, ಸರ್ವಶ್ರೇಷ್ಠ, ಸರ್ವಶಕ್ತ, ನಿರಂಕುಶಾಧಿಕಾರಿ, ಅನೈತಿಕ, ಅಮರ, ಭಯವಿಲ್ಲದ, ಶಾಶ್ವತ ಮತ್ತು ಪವಿತ್ರ ಮತ್ತು ಎಲ್ಲಾ ಅವನು ಮಾತ್ರ ಆರಾಧಿಸಬೇಕೆಂದು ಯೋಗ್ಯನಾಗಿದ್ದಾನೆ.
3. ವೇದಗಳು ಎಲ್ಲಾ ನೈಜ ಜ್ಞಾನದ ಗ್ರಂಥಗಳಾಗಿವೆ, ಅವುಗಳನ್ನು ಓದುವುದು, ಅವುಗಳನ್ನು ಕಲಿಸುವುದು, ಅವುಗಳನ್ನು ಓದಬೇಕು ಮತ್ತು ಅವುಗಳನ್ನು ಓದುವುದನ್ನು ಕೇಳಲು ಎಲ್ಲಾ ಆರ್ಯರ ಪರಮ ಕರ್ತವ್ಯವೂ ಆಗಿದೆ.
4. ಒಂದು ಸತ್ಯವನ್ನು ಸಮ್ಮತಿಸಲು ಮತ್ತು ಸುಳ್ಳನ್ನು ತ್ಯಜಿಸಲು ಯಾವಾಗಲೂ ಸಿದ್ಧರಾಗಿರಬೇಕು. ಎಲ್ಲಾ ಕಾರ್ಯಗಳನ್ನು ಧಾರ್ಮಿಕತೆಗೆ ಅನುಗುಣವಾಗಿ ನಡೆಸಬೇಕು, ಅದು ಸರಿಯಾದ ಮತ್ತು ತಪ್ಪು ಏನು ಎಂದು ಚರ್ಚಿಸಿದ ನಂತರ.
5. ಆರ್ಯ ಸಮಾಜದ ಪ್ರಧಾನ ವಸ್ತುವೆಂದರೆ ಜಗತ್ತಿಗೆ ಒಳ್ಳೆಯದು, ಅದು ಎಲ್ಲರ ದೈಹಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಪ್ರಯೋಜನವನ್ನು ಉತ್ತೇಜಿಸುವುದು. ॐ

ಬಹು ಭಾಷೆ ಹಾಗೂ ಬಹು ಸಂಸ್ಕೃತಿಯ ಅಸ್ಮಿತೆಯನ್ನು ಉಳಿಸುವ

# ಅಂತರರಾಷ್ಟ್ರೀಯ ಮಾತೃಭಾಷಾ ದಿನ




ಫೆಬ್ರವರಿ 21 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಮಾತೃಭಾಷಾ ದಿನವು ಭಾಷಾ ವೈವಿಧ್ಯತೆ ಮತ್ತು ಬಹುಭಾಷಾ ಶಿಕ್ಷಣದ ಮಹತ್ವವನ್ನು ಎತ್ತಿ ತೋರಿಸುತ್ತದೆ. 1952 ರ ಬಂಗಾಳಿ ಭಾಷಾ ಚಳವಳಿಯಲ್ಲಿ ಬೇರೂರಿರುವ ಇದು ಭಾಷಾ ಹಕ್ಕುಗಳಿಗಾಗಿ ಹೋರಾಡಿದವರನ್ನು ಗೌರವಿಸುತ್ತದೆ. ಯುನೆಸ್ಕೋದ ಮಾನ್ಯತೆಯು ಅಳಿವಿನಂಚಿನಲ್ಲಿರುವ ಭಾಷಾಗಳನ್ನು ಸಂರಕ್ಷಿಸುವ ಮತ್ತು ಶಿಕ್ಷಣ ಮತ್ತು ಜಾಗೃತಿ ಉಪಕ್ರಮಗಳ ಮೂಲಕ ವಿಶ್ವಾದ್ಯಂತ ಸಾಂಸ್ಕೃತಿಕ ಗುರುತುಗಳನ್ನು ಬಲಪಡಿಸುವ ಪ್ರಯತ್ನಗಳನ್ನು ಉತ್ತೇಜಿಸುತ್ತದೆ.

ಅಂತರರಾಷ್ಟ್ರೀಯ ಮಾತೃಭಾಷಾ ದಿನವನ್ನು (IMLD) ಆಚರಿಸಲಾಗುತ್ತದೆ. 1952 ರಲ್ಲಿ ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರು ತಮ್ಮ ಮಾತೃಭಾಷೆಯಾದ ಬಂಗಾಳಿಗೆ ಮಾನ್ಯತೆ ನೀಡುವಂತೆ ಒತ್ತಾಯಿಸಿ ನಡೆದ ಒಂದು ದುರಂತ ಘಟನೆಯ ನಂತರ ನವೆಂಬರ್ 1999 ರಲ್ಲಿ ಯುನೆಸ್ಕೋ ಈ ದಿನವನ್ನು ಗೊತ್ತುಪಡಿಸಿತು. ಪ್ರದರ್ಶನಗಳಿಗೆ ಕ್ರೂರವಾಗಿ ಉತ್ತರಿಸಲಾಯಿತು, ಇದು ಆ ಪ್ರದೇಶದಲ್ಲಿ ಭಾಷಾ ಹಕ್ಕುಗಳಿಗಾಗಿ ಚಳುವಳಿಯನ್ನು ಹುಟ್ಟುಹಾಕಿತು.

### ಐತಿಹಾಸಿಕ ಸಂದರ್ಭ

ಅಂತರರಾಷ್ಟ್ರೀಯ ಮಾತೃಭಾಷಾ ದಿನದ ಮೂಲವು 1947 ರಲ್ಲಿ ಭಾರತದ ವಿಭಜನೆಗೆ ಹಿಂದಿನದು ಇದು ಬಂಗಾಳವನ್ನು ಪಶ್ಚಿಮ ಬಂಗಾಳ (ಭಾರತದ ಭಾಗ) ಮತ್ತು ಪೂರ್ವ ಬಂಗಾಳ (ನಂತರದ ಪೂರ್ವ ಪಾಕಿಸ್ತಾನ) ಎಂದು ಬೇರ್ಪಡಿಸಿತು. ಹೊಸ ಪಾಕಿಸ್ತಾನಿ ಸರ್ಕಾರವು ಪೂರ್ವ ಪಾಕಿಸ್ತಾನದಲ್ಲಿ ಬಂಗಾಳಿ ಭಾಷಾಬಹುಸಂಖ್ಯಾತರನ್ನು ನಿರ್ಲಕ್ಷಿಸಿ ಉರ್ದುವನ್ನು ಏಕೈಕ ರಾಷ್ಟ್ರೀಯ ಭಾಷಾಯನ್ನಾಗಿ ಮಾಡಿತು ಈ ಕ್ರಮವು ಬಂಗಾಳಿ ಭಾಷಿಕರಲ್ಲಿ ಅಪಾರ ಅಸಮಾಧಾನ ಮತ್ತು ಪ್ರದರ್ಶನಗಳಿಗೆ ಕಾರಣವಾಯಿತು. ಫೆಬ್ರವರಿ 21, 1952 ರಂದು ಢಾಕಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಆಯೋಜಿಸಿದ ಶಾಂತಿಯುತ ಪ್ರದರ್ಶನವು ಪೊಲೀಸರು ಗುಂಪಿನ ಮೇಲೆ ಗುಂಡು ಹಾರಿಸಿದಾಗ ವಿಕೋಪದಲ್ಲಿ ಕೊನೆಗೊಂಡಿತು, ನಾಲ್ಕು ವಿದ್ಯಾರ್ಥಿಗಳು ಸಾವನ್ನಪ್ಪಿದರು. ಬಂಗಾಳಿ ಭಾಷಾ ಹಕ್ಕುಗಳು ಮತ್ತು ಸಾಂಸ್ಕೃತಿಕ ಗುರುತಿನ ಹೋರಾಟದಲ್ಲಿ ಇದು ಒಂದು ಮಹತ್ವದ ತಿರುವು.

ವರ್ಷಗಳ ಹೋರಾಟದ ನಂತರ, 1956 ರಲ್ಲಿ ಬಂಗಾಳಿ ಭಾಷೆಯನ್ನು ಪಾಕಿಸ್ತಾನದ ರಾಷ್ಟ್ರೀಯ ಭಾಷೆಗಳಲ್ಲಿ ಒಂದೆಂದು ಘೋಷಿಸಲಾಯಿತು. 1971 ರ ಬಾಂಗ್ಲಾದೇಶ ವಿಮೋಚನಾ ಯುದ್ಧದ ನಂತರ, ಬಂಗಾಳಿ ಹೊಸದಾಗಿ ಸ್ವತಂತ್ರವಾದ ಬಾಂಗ್ಲಾದೇಶದ ರಾಜ್ಯ ಭಾಷೆಯಾಗಿ ಹೊರಹೊಮ್ಮಿತು. ಈ ಚಳವಳಿಯ ಸಮಯದಲ್ಲಿ ಸಾಧಿಸಿದ

ಹುತಾತ್ಮತೆಯನ್ನು ವಾರ್ಷಿಕವಾಗಿ ಫೆಬ್ರವರಿ 21 ರಂದು ಗುರುತಿಸಲಾಗುತ್ತದೆ , ಇದನ್ನು ಬಾಂಗ್ಲಾದೇಶದಲ್ಲಿ "ಶೋಹಿದ್ ದಿಬೋಷ್" ಅಥವಾ ಹುತಾತ್ಮರ ದಿನವೆಂದು ಆಚರಿಸಲಾಗುತ್ತದೆ.

## ಜಾಗತಿಕ ಮನ್ನಣೆ

ಫೆಬ್ರವರಿ 21 ರಂದು ಯುನೆಸ್ಕೋ ಅಂತರರಾಷ್ಟ್ರೀಯ ಮಾತೃಭಾಷಾ ದಿನವನ್ನು ಘೋಷಿಸುವುದು ಕೇವಲ ಭಾಷೆಯ ಹಕ್ಕಿಗಾಗಿ ಹೋರಾಡಿದ ಜನರ ಸ್ಮರಣಾರ್ಥವಲ್ಲ, ಬದಲಾಗಿ ಪ್ರಪಂಚದಾದ್ಯಂತ ಎಲ್ಲಾ ಭಾಷೆಗಳನ್ನು ಉಳಿಸಲು ಮತ್ತು ಉತ್ತೇಜಿಸಲು ಕ್ರಮ ಕೈಗೊಳ್ಳಲು ಕರೆಯಾಗಿದೆ . ಈ ದಿನವು ಸುಸ್ಥಿರ ಸಮಾಜಗಳ ಅವಿಭಾಜ್ಯ ಅಂಶಗಳಾಗಿ ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆಯ ಮೌಲ್ಯವನ್ನು ಎತ್ತಿ ತೋರಿಸುತ್ತದೆ . ಇದು ಹಲವಾರು ಅಳಿವಿನಂಚಿನಲ್ಲಿರುವ ಭಾಷೆಗಳ ಭವಿಷ್ಯದ ಬಗ್ಗೆ ಗಮನ ಸೆಳೆಯಲು ಪ್ರಯತ್ನಿಸುತ್ತದೆ, ಇಂದು ವಿಶ್ವದ ಜನಸಂಖ್ಯೆಯ ಅಂದಾಜು 40 % ಜನರು ತಮ್ಮ ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣವನ್ನು ಹೊಂದಿಲ್ಲ. ಪ್ರತಿ ವರ್ಷ, IMLD ಗಾಗಿ ಒಂದು ಗೊತ್ತುಪಡಿಸಿದ ಥೀಮ್ ಇರುತ್ತದೆ, ಅದು ಭಾಷಾ ಸಂರಕ್ಷಣೆಗಾಗಿ ನಿರಂತರ ಸವಾಲುಗಳು ಮತ್ತು ಗುರಿಗಳ ಮೇಲೆ ಕೇಂದ್ರೀಕರಿಸುತ್ತದೆ . ಉದಾಹರಣೆಗಳಲ್ಲಿ ಬಹುಭಾಷಾ ಶಿಕ್ಷಣವು ಜ್ಞಾನವನ್ನು ಗಳಿಸುವ ಮತ್ತು ತಲೆಮಾರುಗಳ ನಡುವೆ ಜ್ಞಾನ ವರ್ಗಾವಣೆಯ ಒಂದು ಆಂತರಿಕ ಭಾಗವಾಗಬೇಕೆಂದು ಪ್ರತಿಪಾದಿಸುವುದು ಸೇರಿದೆ. ಶಾಲೆಯಲ್ಲಿ ಕಾರ್ಯಕ್ಷಮತೆಯನ್ನು ಸುಧಾರಿಸುವಲ್ಲಿ ಮತ್ತು ಕಲಿಯುವವರ ಆತ್ಮ ವಿಶ್ವಾಸವನ್ನು ಬೆಳೆಸಲು ಸಹಾಯ ಮಾಡುವಲ್ಲಿ ಮಾತೃಭಾಷೆಗಳ ಬಳಕೆಯನ್ನು ಹೆಚ್ಚು ಬಲವಾಗಿ ಅರಿತುಕೊಳ್ಳಲಾಗುತ್ತದೆ.

## ಆಚರಣೆಗಳು

ಭಾಷಾ ವೈವಿಧ್ಯತೆಯನ್ನು ಭಾಷಾ ವೈವಿಧ್ಯತೆಯನ್ನು ಉತ್ತೇಜಿಸಲು ವಿವಿಧ ಚಟುವಟಿಕೆಗಳೊಂದಿಗೆ ಪ್ರಪಂಚದಗಳೊಂದಿಗೆ ಪ್ರಪಂಚದಾದ್ಯಂತ ಅಂತರಾಷ್ಟ್ರೀಯ ಮಾತೃಭಾಷಾ ದಿನವನ್ನು ಆಚರಿಸಲಾಗುತ್ತದೆ. ಬಾಂಗ್ಲಾದೇಶದಲ್ಲಿ, ಇದು ರಾಷ್ಟ್ರೀಯ ರಜಾದಿನವಾಗಿದ್ದು, ಢಾಕಾದ ಹುತಾತ್ಮರ ಸ್ಮಾರಕದಲ್ಲಿ ಹೂವಿನ ಹಾರಗಳನ್ನು ಇಡುವ ಮೂಲಕ ಆಚರಿಸಲಾಗುತ್ತದೆ, ಅಲ್ಲಿ ವ್ಯಕ್ತಿಗಳು ತಮ್ಮ ಭಾಷಾ ಹಕ್ಕುಗಳಿಗಾಗಿ ಹೋರಾಡಿ ಮಡಿದವರನ್ನು ಗೌರವಿಸುತ್ತಾರೆ . ಬಂಗಾಳಿ ಸಾಹಿತ್ಯ ಮತ್ತು ಕಲೆಯ ಶ್ರೀಮಂತಿಕೆಯನ್ನು ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ನಡೆಸಲಾಗುತ್ತದೆ .

2025 ರಲ್ಲಿ IMLD ಯ 25 ನೇ ವಾರ್ಷಿಕೋತ್ಸವವನ್ನು ಆಚರಿಸುವ ಹಾದಿಯಲ್ಲಿ, ಪ್ರಪಂಚದಾದ್ಯಂತ ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಉಳಿಸುವ ಬದ್ಧತೆಗಳನ್ನು ನಾವು ಪುನರುಚ್ಚರಿಸುತ್ತಿರುವಾಗ, ಭಾಷಾ ವೈವಿಧ್ಯತೆಯನ್ನು ರಕ್ಷಿಸುವ ಪ್ರಯತ್ನಗಳ ಪ್ರಗತಿಯನ್ನು ಹಿಂತಿರುಗಿ ನೋಡುವುದು ಮತ್ತು ಪರಿಗಣಿಸುವುದು ಸಾಧ್ಯ. UNESCO ಪ್ರಾಯೋಜಿಸಿದ ಅಂತರರಾಷ್ಟ್ರೀಯ ಸಮ್ಮೇಳನವು 2030 ರವೇಳೆಗೆ ಭಾಷಾ ರಕ್ಷಣೆಯ ಮೂಲಕ ಅಂತರ್ಗತ ಸಮಾಜಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ವೇಗಗೊಳಿಸುವ ವಿಷಯವನ್ನು ಹೊಂದಿದೆ.

ಕೊನೆಯದಾಗಿ, ಅಂತರರಾಷ್ಟ್ರೀಯ ಮಾತೃಭಾಷಾ ದಿನವು ಭಾಷಾ ಹಕ್ಕುಗಳು ಮತ್ತು ಗುರುತಿನ ಸಂರಕ್ಷಣೆಯ ಕಟ್ಟುನಿಟ್ಟಾದ ಜ್ಞಾಪನೆಯಾಗಿದೆ. ಇದು ವ್ಯಕ್ತಿಗಳು ಮತ್ತು ರಾಷ್ಟ್ರಗಳು ತಮ್ಮ ವಿವಿಧ ಭಾಷೆಗಳನ್ನು ಕಲಿಯಲು ಮತ್ತು ಗೌರವಿಸಲು ಹಾಗೂ ತಮ್ಮ ಮಾತೃಭಾಷೆಯ ಮೂಲಕ ಕೇಳಲು ಹೋರಾಡುತ್ತಿರುವ ಜನರ ಪರವಾಗಿ ಧ್ವನಿ ಎತ್ತಲು ಕರೆ ನೀಡುತ್ತದೆ .



**ಸಮೃದ್ಧಿ ಸುಜ್ಞಾನ**
'ನಮ್ಮೊಳಗಿನ ವಿದ್ಯಾರ್ಥಿ ಕಲಿಯಲು ಒಪ್ಪಿದರೆ ಎಲ್ಲವೂ, ಎಲ್ಲರೂ ಗುರುಗಳೆ'



# ಬೀಟ್ರೂಟ್ ಸೇವಿಸಿ ಸಕ್ಕರೆ ಖಾಯಿಲೆ ದೂರವಿರಿಸಿ

ಗಂಗಾ ನೀಲಪ್ಪ ಅಮಾತೆಪ್ಪನವರು

ಮಧುಮೇಹ ಇದು ಎಳೆ ಕೂಸಿಗೂ ಗೊತ್ತಿರುವ ಖಾಯಿಲೆ ವಯಸ್ಸಿನ ಮಿತಿಯಿಲ್ಲದೆ ಬಲೆಯಂತೆ ಹಬ್ಬಿ ತನ್ನೊಳಗೆ ಕೆಡವಿಕೊಂಡಿರುವ ಸಿಹಿ ಹೆಸರಿನ ವಿಷಭರಿತ ಖಾಯಿಲೆ. ಒಮ್ಮೆ ಸಕ್ಕರೆ ಖಾಯಿಲೆ ಬಂದರೆ ಮುಗಿಯಿತು ಆಹಾರದ ಆಯ್ಕೆಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಭಾಯಿಸುವುದು ಬಹು ಮುಖ್ಯ .ಸಾಯಿವವರೆಗೂ ಸಿಹಿಯಿಂದ ಮಾಡಿದ ಮೃಷ್ಟಾನ್ನ ಬೋಜನವನ್ನು ಕೇವಲ ನೋಡಿ ತೃಪ್ತಿಪಟ್ಟುಕೊಳ್ಳಬೇಕು. ಪ್ರತಿ ದಿನ ಮಾತ್ರೆ ಸೇವಿಸಬೇಕು. ದೀಹದೊಳಗೆ ಇನ್ನು ಸಕ್ಕರೆ ಪ್ರಮಾಣ ಹೆಚ್ಚಾದರೆ ಇನ್ಸುಲಿನ್ ಮೊರೆ ಹೋಗಬೇಕು. ಹೀಗೆ ಜೀವನದುದ್ದಕ್ಕೂ ಅದನ್ನು ಹತೋಟಿಗೆ ತರವುದೇ ಹೋರಾಟವಾಗಿಬಿಡುತ್ತದೆ. ಹಾಗಾದರೆ ಸಕ್ಕರೆ ಕಾಯಿಲೆಯಿಂದ ಮುಕ್ತಿ ಇಲ್ಲವೇ ದಿನನಿತ್ಯ ಆಹಾರದಿಂದ ಅದನ್ನು ಕಟ್ಟಿಹಾಕಲು ಬರುವುದಿಲ್ಲವೆ ಎಂದು ಕೊಡರೆ ಅದಕ್ಕೆ ರಾಮಬಾಣವೇ ಬೀಟ್ರೂಟ್.. ಕೆಂಪು ಕೆಂಪಾಗಿ ಸಿಹಿ ಸಿಹಿಯಾಗಿರುವ ಬೀಟ್ರೂಟ್ ನಿಜಕ್ಕೂ ಸಕ್ಕರೆ ಖಾಯಿಲೆಗೆ ಔಷಧಿಯಂತೆ ಕಾರ್ಯನಿರ್ವಹಿಸುತ್ತದೆ. ಪ್ರತಿದಿನದ ನಿಯಮಿತ ಸೇವನೆಯಿಂದ ದೇಹದಲ್ಲಿನ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಜೊತೆಗ ರಕ್ತದ ಪ್ರಮಾಣ ಹೆಚ್ಚಿಸುವುದಲ್ಲದೆ ಸೌಂದರ್ಯ ವರ್ಧಕದಂತೆಯೂ ಕೆಲಸ ಮಾಡುತ್ತದೆ.

**ಬೀಟ್ರೂಟ್ ಪೋಷಕಾಂಶಗಳ ಕಣಜ:** ಹೇರಳವಾದ ಪೋಷಕಾಂಶಗಳನ್ನು ಹೊಂದಿರುವುದರಿಂದಲೇ ಬೀಟ್ರೂಟ್ ತರಕಾರಿಗಳ ಪಟ್ಟಿಯಲ್ಲಿ ಪ್ರಾಮುಖ್ಯತೆ ಪಡೆದಿರುವ ಆಹಾರ. ಇದರಲ್ಲಿ ಜೀವಸತ್ವ ಖನಜ, ಕಬ್ಬಿಣ, ಫೈಬರ್ ಮತ್ತು ಅನೇಕ ಜೈವಿಕ ಸಕ್ರಿಯ ಸಂಯುಕ್ತಗಳು ಒಳಗೊಂಡಿವೆ. ಅತಿ ಕಡಿಮೆ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟ್ ಮತ್ತು ಸಕ್ಕರೆ ಮಟ್ಟವನ್ನು ಇರುವುದರಿಂದ ಡಯಾಬಿಟಿಸ್ ಇರುವವರೆಗೆ ಉತ್ತಮ ಆಯ್ಕೆಯಾಗಿದೆ.

**ಸಕ್ಕರೆ ಮಟ್ಟ ಕಟ್ಟಿಹಾಕುತ್ತದೆ ಬೆಟಾಯಿನ್:** ಬೀಟ್ರೂಟ್ನಲ್ಲಿ ಬೆಟಾಯಿನ್ ಎಂಬ ವಿಶೇಷ ಸಂಯುಕ್ತವಿದೆ. ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡುತ್ತದೆ. ಹಾಗೂ ಅದರಲ್ಲಿರುವ ಉತ್ಕರ್ಷಣ ನಿರೋಧಕಗಳು ಮಧುಮೇಹದ ತೊಂದರೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಊಟದ ನಂತರ ಇರಲಿ ಬೀಟ್ರೂಟ್ ಜ್ಯೂಸ್:** ಊಟದ ನಂತರ ಅರ್ಧ ಕಪ್ಗಿಂತ ಕಡಿಮೆ ಬೀಟ್ರೂಟ್ನ ರಸ ಸೇವಿಸುವುದರಿಂದ ರಕ್ತದಲ್ಲಿನ ಸಕ್ಕರೆಯ ಮಟ್ಟದ ಮೇಲೆ ಪ್ರಯೋಜನಕಾರಿ ಪರಿಣಾಮ ಬೀರುತ್ತದೆ. ಈ ವಿಷಯದ ಕುರಿತು ಸಂಶೋದನೆಗಳು ನಡೆದಿದ್ದು ಸಕ್ಕರೆ ಖಾಯಿಲೆ ಇರುವ ವ್ಯಕ್ತಿಗಳು ದಿನನಿತ್ಯ ಊಟದ ಬಳಿಕ ಬೀಟ್ರೂಟ್ ಜ್ಯೂಸ್ ಸೇವಿಸಿದ್ದರಿಂದ ಆರೋಗ್ಯವಂತ ವ್ಯಕ್ತಿಯ ಪ್ರಮಾಣದಷ್ಟೆ ಸಕ್ಕರೆ ಮಟ್ಟ ಸ್ಥಿರವಾಗಿದ್ದು ತಿಳಿದುಬಂದಿದೆ.

**ಕಣ್ಣು ಮತ್ತು ರಕ್ತನಾಳಗಳ ರಕ್ಷಣೆ:** ಬೀಟ್ರೂಟ್ನಲ್ಲಿ ನೈಟ್ರೇಟ್ ಹೇರಳವಾಗಿದ್ದು ಇದು ರಕ್ತದೊತ್ತಡವನ್ನು ನಿಯಂತ್ರಿಸಿ ಡಯಾಬಿಟಿಸ್ ರೋಗಿಗಳಿಗೆ ಆಗುವ ರಕ್ತನಾಳಗಳ ಹಾನಿ, ಕಣ್ಣುಗಳು ಅಸಾಮರ್ಥ್ಯ ಮತ್ತು ಹೃದಯದ ಸಮಸ್ಯೆಗಳನ್ನು ನಿಯಂತ್ರಿಸಲು ಸಹಾಯಕವಾಗಿದೆ. ಹೃದಯದ ಸಮಸ್ಯೆ ತಡೆಗಟ್ಟುತ್ತದೆ. ಬೀಟ್ರೂಟ್ನಲ್ಲಿ ಕಂಡುಬರುವ ಉತ್ಕರ್ಷಣ ನಿರೋಧಕಗಳು ಆಕ್ಸಿಡೇಟಿಸ್ ಒತಡವನ್ನು ಕಡಿಮೆ ಮಾಡುವ ಮೂಲಕ ಮಧುಮೇಹ ರೋಗಿಯನ್ನು ನರರೋಗ ರೇಟಿನೋವತಿ ಮತ್ತು ಹೃದಯರಕ್ತನಾಳದ ಕಾಯಿಲೆಗಳಿಂದ ರಕ್ಷಿಸುತ್ತದೆ.

**ಹಸಿವಿನ ನಿಯಂತ್ರಣ:** ಬೀಟ್ರೂಟ್ನಲ್ಲಿ ಹೆಚ್ಚಿನ ಫೈಬರ್ ಅಂಶವಿದ್ದು, ಹಸಿವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಮಧುಮೇಹಿಗಳು ಅನಗತ್ಯವಾಗಿ ತಿನ್ನುವುದನ್ನು ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಉತ್ತಮವಾಗಿ ನಿಯಂತ್ರಿಸಲು ಸಹಾಯ ಮಾಡುತ್ತದೆ.

ಸಕ್ಕರೆ ಖಾಯಿಲೆ ಸಂಪೂರ್ಣ ನಿವಾರಣೆಯಾಗದ ಖಾಯಿಲೆಯಾದರೂ ಅದನ್ನು ಊಟದ ಆಯ್ಕೆಯಿಂದಲೆ ಹತೋಟಿಗೆ ಇಟ್ಟುಕೊಳ್ಳುವುರಿಂದ ಭವಿಷ್ಯದಲ್ಲಾಗುವ ಸಮಸ್ಯೆಯನ್ನು ಹತೋಟಿಗೆ ತರಲು ಸಹಾಯಕವಾಗುತ್ತದೆ. ಆಹಾರದ ಜೊತೆಗೆ ಮಿತವಾದ ವ್ಯಾಯಾಮ ಮತ್ತು ನಿದ್ರೆ ಇದರ ಮೇಲೆ ನೇರ ಪರಿಣಾಮ ಬೀರುತ್ತದೆ. ದೇಹದಲ್ಲಿ ಸಕ್ಕರೆ ಪ್ರಮಾಣ ಮಿತಿ ಮೀರಿದ ಮೇಲೆ ಔಷಧಿಗಳ ದುಂಬಾಲು ಬೀಳುವ ಮೊದಲು ಇಂತಹ ಮನೆ ಮದ್ದು ಮಾಡುವುದರಿಂದ ಆರೋಗ್ಯ ಮತ್ತು ಆರ್ಥಿಕತೆ ಎರಡನ್ನು ಸುಧಾರಿಸಿಕೊಳ್ಳಲು ಸಾಧ್ಯ.

ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ಬೆಂಗಳೂರು ದಕ್ಷಿಣ ಜಿಲ್ಲೆ - 562 120

ದೂರವಾಣಿ : 8971608213. ಇ-ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**


10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213


**ಮನೆ ಮದ್ದು :**

ಕೊತ್ತಂಬರಿ ಸೊಪ್ಪನ್ನು ಎಳೆನೀರಿನೊಂದಿಗೆ ರುಬ್ಬಿ, ಕಲ್ಲುಸಕ್ಕರೆ, ಏಲಕ್ಕಿ ಪುಡಿ ಸೇರಿಸಿ ದಿನವೂ ಒಂದು ಭಾರಿ ಸೇವಿಸುತ್ತಿದ್ದರೆ ಎದೆನೋವು ಕಡಿಮೆ ಆಗುವುದು.

# ಸಾಲ ಕೊಟ್ಟ ಬಾತುಕೋಳಿ



ಒಂದು ಕೆಸರಿನ ಕೊಳದಲ್ಲಿ ಹೆಣ್ಣು ಬಾತುಕೋಳಿಯೊಂದು ಸುಖವಾಗಿತ್ತು. ಒಮ್ಮೆ ಆ ದೇಶದ ರಾಜ ಆ ಕೊಳದ ಬಳಿಗೆ ಬಂದು ಕೊಳಕ್ಕೆ ಹಾರಿ ಜೀವ ಕಳೆದುಕೊಳ್ಳಲು ಮುಂದಾದ. ಆಗ ಆ ಬಾತುಕೋಳಿ ಅಡ್ಡ ನಿಂತು 'ಆತ್ಮಹತ್ಯೆ ಮಹಾಪಾಪವಲ್ಲವೆ? ನನ್ನನ್ನು ನೋಡು, ನಾನು ಈ ಕೆಸರಿನಲ್ಲಿ ಸುಖದಿಂದ ಬದುಕುತ್ತಿದ್ದೇನೆ. ನೀನು ನೋಡಿದರೆ ರಾಜನ ಹಾಗೆ ಕಾಣಿಸುತ್ತಿರುವೆ. ಯಾಕೆ ಸಾಯುತ್ತಿಯಾ?' ಎಂದಿತು. ಅದಕ್ಕೆ ರಾಜ 'ಈ ವರ್ಷ ಕ್ಷಾಮ ಬಂದಿದೆ. ಈ ಕಾರಣ ಹೇಳಿ ಪ್ರಜೆಗಳು ತೆರಿಗೆ ಕೊಟ್ಟಿಲ್ಲ. ಅರಮನೆಯ ಪರಿವಾರದವರಿಗೆ ಊಟ ಮಾಡಲು ಹಿಡಿ ಕಾಳುಗಳೂ ಇಲ್ಲ. ಶತ್ರುಗಳು ಬಂದರೆ ಎದುರಿಸಲು ಸೈನಿಕರಿಗೆ ಕೊಡಬೇಕಾದ ಸಂಬಳಕ್ಕೂ ಗತಿಯಿಲ್ಲ. ಇಂತಹ ಅವಮರ್ಯಾದೆಯಿಂದ ಬದುಕುವ ಬದಲು ಸಾಯುವುದೇ ಮೇಲಲ್ಲವೆ?' ಎಂದ. ಅದಕ್ಕೆ ಬಾತುಕೋಳಿ 'ನಾನು ಹಲವು ಚೀಲಗಳಲ್ಲಿ ತುಂಬಾ ಕಾಳು ಸಂಗ್ರಹಿಸಿಟ್ಟಿದ್ದೇನೆ. ನಿನಗೆ ಎಷ್ಟು ಬೇಕು ಹೇಳು. ಅಷ್ಟನ್ನು ಸಾಲವಾಗಿ ಕೊಡುತ್ತೇನೆ' ಎಂದಿತು.


ರಾಜ 'ಎಲ್ಲಿದೆ, ಬೇಗ ತೋರಿಸು. ಬಂಡಿಗಳನ್ನು ಕಳುಹಿಸಿ ಅರಮನೆಗೆ ಸಾಗಿಸುತ್ತೇನೆ' ಎಂದಾಗ ಬಾತುಕೋಳಿ, 'ಕೊಂಡುಹೋದುದನ್ನು ಮತ್ತೆ ಯಾವಾಗ ತಂದು ಕೊಡುತ್ತಿ ಎಂಬುದನ್ನು ಹೇಳಬೇಕಲ್ಲ' ಎಂದಾಗ ಆತ 'ಈಗ ತಾನೇ ಮಳೆ ಬಂದಿದೆ. ರೈತರು ಬಿತ್ತನೆ ಆರಂಭಿಸಿದ್ದಾರೆ. ನಾಲ್ಕು ತಿಂಗಳಲ್ಲಿ ಕೊಯ್ಲು ಆಗುತ್ತದೆ. ನಿನ್ನ ಸಾಲಕ್ಕೆ ಬಡ್ಡಿ ಸೇರಿಸಿ ಇಲ್ಲಿಗೇ ತಂದುಕೊಟ್ಟು ಹೋಗುತ್ತೇನೆ' ಎಂದು ಭರವಸೆ ನೀಡಿದಾಗ ಬಾತುಕೋಳಿಯು ಕಾಳಿನ ದೊಡ್ಡ ರಾಶಿಯನ್ನೇ ರಾಜನಿಗೆ ಸಾಲ ಕೊಟ್ಟಿತು. ಎಲ್ಲವನ್ನೂ ರಾಜ ಅರಮನೆಗೆ ಸಾಗಿಸಿ ಎಲ್ಲಾ ಪ್ರಜೆಗಳಿಗೂ ಹಂಚಿ ತಾನೂ ಬಳಸಿದ. ಆದರೆ ದಿನಗಳು ಸರಿದರೂ ಆತ ಸಾಲ ಮರಳಿಸಲಿಲ್ಲ. ಬಾತುಕೋಳಿ ಅರಮನೆಗೆ ಬಂದು 'ನನ್ನ ಸಾಲವನ್ನು ಈಗಲೇ ಮರಳಿಸು' ಎಂದು ಕೇಳಿತು. ರಾಜ ತನಗೊಂದೂ ನೆನಪೇ ಇಲ್ಲದಂತೆ ನಟಿಸಿದ. ರಾಜನ ಮೋಸ ತಿಳಿದ ಬಾತುಕೋಳಿಗೆ ದುಃಖ ಮತ್ತು ಸಿಟ್ಟು ಉಕ್ಕಿ 'ಮೋಸ ಮಾಡಬೇಡ. ನನಗೂ ಹಲವು ಸ್ನೇಹಿತರಿದ್ದಾರೆ. ನೀನು ನನ್ನ ಸಾಲ ಮರಳಿಸದಿದ್ದರೆ ಅವರನ್ನು ಕರೆದುಕೊಂಡು ಬರುತ್ತೇನೆ' ಎಂದಾಗ ರಾಜ ನಕ್ಕು 'ನಿನಗೆ ಅಂತಹ ಸ್ನೇಹಿತರಿರುವರೆ? ಅಬ್ಬಬ್ಬ, ನೀನು ಯಾವ ದೇಶದ ರಾಣಿ?' ಎಂದ.

ನಿರಾಶೆಯಿಂದ ಬಾತುಕೋಳಿ ಮರಳಿ ಕೊಳಕ್ಕೆ ಬಂದಿತು. ಅದು ಕೊಳದೊಂದಿಗೆ' ನನ್ನ ಸಾಲವನ್ನು ರಾಜನಿಂದ ವಸೂಲು ಮಾಡಲು ನನಗೆ ಸಹಾಯ ಮಾಡುವೆಯಾ?' ಎಂದಾಗ ಕೊಳದ ನೀರು 'ಖಂಡಿತ. ಆದರೆ ನನ್ನನ್ನು ಜೊತೆಗೆ ಹೇಗೆ ಕರೆದುಕೊಂಡು ಹೋಗುವೆ?' ಎಂದಿತು. ಅದಕ್ಕೆ ಬಾತುಕೋಳಿ ಕೊಳದ ಎಲ್ಲಾ ನೀರನ್ನು ಚೀಲದೊಳಗೆ ತುಂಬಿಕೊಂಡು ಹೊರಟಿತು. ಆಗ ಅದಕ್ಕೆ ಕಣಜದ ಹುಳ ಎದುರಾಯಿತು. ಬಾತುಕೋಳಿ ಅದರಿಂದ ಸಹಾಯ ಕೇಳಿದಾಗ ಅದೂ ಒಪ್ಪಿತು. ಕಣಜದ ಹುಳಗಳನ್ನು ಚೀಲದಲ್ಲಿ ತುಂಬಿಸಿ ಬಾತುಕೋಳಿ ಅರಮನೆಗೆ ತಲಪಿತು. 'ಮತ್ತೆ ಯಾಕೆ ಬಂದೆ?' ರಾಜ ಕೋಪದಿಂದ ಕೇಳಿದಾಗ ಬಾತುಕೋಳಿ 'ಕೊಟ್ಟ ಸಾಲ ಮರಳಿ ಪಡೆಯೋದಕ್ಕೆ ನನ್ನ ಕೆಲವು ಗೆಳೆಯರನ್ನೂ ಕರೆದುಕೊಂಡು ಬಂದಿದ್ದೆನೆ' ಎಂದಿತು.

ರಾಜ ಸೇವಕರನ್ನು ಕರೆದು 'ಬೆಂಕಿ ಧಗಧಗ ಉರಿಯುವ ಒಲೆಯ ಮೇಲೆ ಮಡಕೆಯನ್ನಿಟ್ಟು ಅದರೊಳಗೆ ಈ ಬಾತುಕೋಳಿಯನ್ನು ಹಾಕಿ ಬೇಯಿಸಿ' ಎಂದು ಆಜ್ಞಾಪಿಸಿದ. ಸೇವಕರು ಹಾಗೆ ಮಾಡಲು ಮುಂದಾದಾಗ ಬಾತುಕೋಳಿ, 'ನೀರಣ್ಣಾ, ಬಾ ಕಾಪಾಡು' ಎಂದು ಕೂಗಿತು. ಆಗ ಚೀಲದಲ್ಲಿಕಟ್ಟಿಕೊಂಡು ಬಂದಿದ್ದ ನೀರು ಧಾರಾಕಾರವಾಗಿ ಸುರಿದು ಬೆಂಕಿ ಆರಿಸಿತು. ಆಗ ರಾಜ ಬಾತುಕೋಳಿಯ ಕತ್ತು ಹಿಡಿದು ಕೊಯ್ಯಲು ಮುಂದಾದಾಗ ಬಾತುಕೋಳಿ 'ಕಣಜಣ್ಣಾ ಬಾ' ಎಂದು ಕರೆಯಿತು. ಆಗ ಗೂಡಿನಿಂದ ಸಾವಿರಾರು ಹುಳಗಳು ಬಂದು ರಾಜನಿಗೆ ಒಂದೇ ಸಮನೆ ಕುಟುಕಲಾರಂಭಿಸಿದವು. ಅದರ ವಿಷದಿಂದ ರಾಜನ ಇಡೀ ದೇಹ ಕುಂಬಳಕಾಯಿಯಂತೆ ಊದಿಕೊಂಡಿತು.

ರಾಜ ಗೋಳಾಡುತ್ತ 'ನನ್ನ ಜೀವ ಉಳಿಸು. ನಿನ್ನ ಸಾಲ ಮರಳಿ ಕೊಡ್ತೀನಿ' ಎಂದು ಬೇಡಿದಾಗ 'ನಿನ್ನ ಖಜಾನೆಯ ಬೀಗದ ಕೀಲಿಕೈಯ ಗೊಂಚಲು ತಂದುಕೊಟ್ರೆ ಜೀವವುಳಿಸುತ್ತೇನೆ' ಎಂದು ಬಾತುಕೋಳಿ ಹೇಳಿತು. ರಾಜ ಕೀಲಿ ಕೈಯನ್ನು ಅದರ ಕೈಗೆ ತಂದುಕೊಟ್ಟಾಗ ಅದನ್ನು ಹಿಡಿಯುತ್ತಲೇ ಬಾತುಕೋಳಿ ಚಂದದ ರಾಜಕುಮಾರಿಯಾಯಿತು. ರಾಜನಿಗೆ ಅಚ್ಚರಿಯಾಗಿ ' ಬಾತುಕೋಳಿ ಹೆಣ್ಣಾಗುವುದೆಂದರೇನು? ನೀನು ಯಾರು?' ಎಂದು ಕೇಳಿದ. ಅದಕ್ಕೆ ಆ ರಾಜಕುಮಾರಿ 'ನಿನ್ನ ಅಪ್ಪ ಮಾಟಗಾತಿಯರ ಮೂಲಕ ನಮ್ಮ ರಾಜ್ಯವನ್ನು ಕಬಳಿಸಲು ನನ್ನನ್ನು ಬಾತುಕೋಳಿಯನ್ನಾಗಿ ಮಾಡಿದ. ಈ ಕೀಲಿಕೈಯ ಗೊಂಚಲಲ್ಲಿ ಆ ರಾಜ್ಯದ ಕೀಲಿಕೈಯೂ ಇದೆ. ಅದು ಕೈ ಸೇರಿದ ಕೂಡಲೇ ನನಗೆ ಮೊದಲಿನ ಜನ್ಮ ಬರುತ್ತದೆಂದು ನನಗೆ ತಿಳಿದಿತ್ತು. ಈಗ ಮೊದಲಿನ ರೂಪ ಬಂದಿದೆ. ನಾನು ನನ್ನೂರಿಗೆ ಹೋಗುತ್ತೇನೆ' ಎಂದು ಹೇಳಿ ಹೊರಟುಹೋದಳು.

ॐ



ದೇಶದ ಅಭಿವೃದ್ಧಿಗೆ ವಿಜ್ಞಾನಿಗಳ ಕೊಡುಗೆಗಳನ್ನು ಗುರುತಿಸುವ

# ರಾಷ್ಟ್ರೀಯ ವಿಜ್ಞಾನ ದಿನ



ಪ್ರತಿ ವರ್ಷ ಫೆಬ್ರವರಿ 28 ನೇ ದಿನಾಂಕವನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ. ವಿಜ್ಞಾನ ಹಾಗೂ ನಮ್ಮ ಜೀವನದಲ್ಲಿ ಅದರ ಮಹತ್ವದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ರಾಷ್ಟ್ರೀಯ ವಿಜ್ಞಾನ ದಿನ ಆಚರಣೆಯ ಉದ್ದೇಶ. ಉಪನ್ಯಾಸಗಳು, ಚರ್ಚಾಸ್ಪರ್ಧೆಗಳು, ರಸಪ್ರಶ್ನೆ, ವಸ್ತುಪ್ರದರ್ಶನ–ಹೀಗೆ ಅನೇಕ ಚಟುವಟಿಕೆಗಳನ್ನು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಂದರ್ಭದಲ್ಲಿ ದೇಶದ ವಿವಿಧೆಡೆ ಹಮ್ಮಿಕೊಳ್ಳಲಾಗುತ್ತದೆ. ಪ್ರತೀ ವರ್ಷ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಚಟುವಟಿಕೆಗಳನ್ನು ಒಂದು ನಿರ್ದಿಷ್ಟ ವಿಷಯದ ಸುತ್ತ ಆಯೋಜಿಸಲಾಗುತ್ತದೆ.

ಭಾರತದ ಹೆಮ್ಮೆಯ ವಿಜ್ಞಾನಿ ಸರ್ ಸಿ. ವಿ. ರಾಮನ್ ಅವರ ಅಪೂರ್ವ ಸಾಧನೆಯ ನೆನಪಿನಲ್ಲಿ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನ ಎಂದು ಗುರುತಿಸಲಾಗಿದೆ. ಅವರು 1928 ರ ಫೆಬ್ರವರಿ 28 ರಂದು 'ರಾಮನ್ ಎಫೆಕ್ಟ್' ಎಂದೇ ಪ್ರಸಿದ್ಧವಾದ ತಮ್ಮ ಅಧ್ಯಯನದ ವಿವರಗಳನ್ನು ಜಗತ್ತಿಗೆ ತಿಳಿಸಿದ್ದರು. ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊತ್ತಮೊದಲ ವಿಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಸಿ. ವಿ. ರಾಮನ್ ಅವರ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್ ಎಂದು. ಅವರು ಜನಿಸಿದ್ದು ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ, 1888 ರ ನವೆಂಬರ್ 7ರಂದು. ಅವರ ತಂದೆ ಚಂದ್ರಶೇಖರ ಅಯ್ಯರ್ ಗಣಿತ ಹಾಗೂ ಭೌತವಿಜ್ಞಾನದ ಶಿಕ್ಷಕರಾಗಿದ್ದರು. ನೋಬೆಲ್ ಪ್ರಶಸ್ತಿ ಪಡೆದ ಮತ್ತೋರ್ವ ವಿಜ್ಞಾನಿ ಸುಬ್ರಹ್ಮಣ್ಯಂ ಚಂದ್ರಶೇಖರ್ ಅವರು ಸಿ. ವಿ. ರಾಮನರ ಸ್ವಂತ ಅಣ್ಣನ ಮಗ.

ಅಂದಿನ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ಶಿಕ್ಷಣ ಮುಗಿಸಿದ ರಾಮನ್, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತಸ್ಥಾನ ಗಳಿಸುವ ಮೂಲಕ ಕಲ್ಕತ್ತದಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್ ಆಗಿ ನೇಮಕಗೊಂಡರು. ಸರಕಾರದಲ್ಲಿ ಉನ್ನತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಅವರಲ್ಲಿ ವಿಜ್ಞಾನದ ಕಡೆಗಿನ ತುಡಿತ ಹಾಗೆಯೇ ಉಳಿದಿತ್ತು. ಅದರ ಪರಿಣಾಮವಾಗಿ ಅವರು ತಮ್ಮ ಹುದ್ದೆಯನ್ನು ತ್ಯಜಿಸಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದರು, ಮುಂದೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಿರ್ದೇಶಕರಾಗಿ ಬೆಂಗಳೂರಿಗೆ ಬಂದವರು ತಮ್ಮ ಕೊನೆಯ ಉಸಿರಿನ ತನಕ ವಿವಿಧ ಸಂಶೋಧನೆಗಳಲ್ಲಿ ಮಗ್ನರಾಗಿದ್ದರು.

ಇಂತಹ ಮಹಾನ್ ವಿಜ್ಞಾನಿಯನ್ನು ದೇಶದ ಪ್ರತಿಯೊಬ್ಬರಿಗೂ ಪರಿಚಯಿಸಬೇಕು ಭಾರತದ ವೈಜ್ಞಾನಿಕ ಶಕ್ತಿ ಜಗತ್ತಿಗೆ ತಿಳಿಯಬೇಕು ಎಂಬ ಮೂಲ ಉದ್ದೇಶದಿಂದ ಇಂದಿನ ದಿನವನ್ನು ವಿಶೇಷವಾಗಿ ವಿಜ್ಞಾನಿಗಳಿಗೆ ಸಮರ್ಪಿತವಾಗಿದೆ. ಇದರ ಜೊತೆಗೆ ಈ ದೇಶದ ಆರ್ಥಿಕ, ಶೈಕ್ಷಣಿಕ, ಕೈಗಾರಿಕಾಭ್ಯುದಯದ ಆಧಾರ ಸ್ಥಂಭಗಳು.

ಸಿ.ವಿ. ರಾಮನ್ ಕೇವಲ ವಿಜ್ಞಾನಿಗಳಾಗಿರದೆ ಸಮಾಜ ವಿಜ್ಞಾನಿಗಳಾಗಿ ಎಂದು ಕರೆ ನೀಡಿ ಸಮಾಜದ ಅಭ್ಯುದಯಕ್ಕೆ ನಮ್ಮ ದೇಶದ ವಿಜ್ಞಾನಿಗಳು ಶ್ರಮಿಸಲಿ ಭಾರತವನ್ನು ಮತ್ತೆ ತಮ್ಮ ಶಕ್ತಿಯ ಮೂಲಕ ಜಗದ್ಗುರುವನ್ನಾಗಿಸಲಿ ಎಂದು ಆಶಿಸುತ್ತ ಭವ್ಯ ದಿವ್ಯ ಸದೃಢ ಸಮೃದ್ಧಭಾರತವನ್ನು ಕಾಣುವ ಪರಿಕಲ್ಪನೆಯೂ ದಿಟ್ಟ ಸಂಕಲ್ಪವೂ ಹೌದು.

## ವಿಜ್ಞಾನ ದಿನದ ಇತಿಹಾಸ

1928 ರಲ್ಲಿ ಡಾ. ಸಿ.ವಿ. ರಾಮನ್ ಅವರು ರಾಮನ್ ಪರಿಣಾಮದ ಗಮನಾರ್ಹ ಆವಿಷ್ಕಾರವನ್ನು ಗೌರವಿಸಲು ಪ್ರತಿ ವರ್ಷ ಫೆಬ್ರವರಿ 28 ರಂದು ಭಾರತದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಭೌತಶಾಸ್ತ್ರ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಯ ಸಾಧನೆಯನ್ನು ಸೂಚಿಸುತ್ತದೆ, ಇದು ಡಾ. ರಾಮನ್ ಅವರಿಗೆ 1930 ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ತಂದುಕೊಟ್ಟಿತು.

ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುವ ಕಲ್ಪನೆಯನ್ನು ಡಾ. ರಾಮನ್ ಅವರೇ ಪ್ರಸ್ತಾಪಿಸಿದರು ಮತ್ತು ಇದನ್ನು 1986 ರಲ್ಲಿ ಭಾರತ ಸರ್ಕಾರ ಅಧಿಕೃತವಾಗಿ ಗುರುತಿಸಿತು. ದೈನಂದಿನ ಜೀವನದಲ್ಲಿ ವಿಜ್ಞಾನದ ಮಹತ್ವವನ್ನು ಉತ್ತೇಜಿಸುವುದು ಮತ್ತು ರಾಷ್ಟ್ರದ ಪ್ರಗತಿಗೆ ವಿಜ್ಞಾನಿಗಳ ಕೊಡುಗೆಗಳನ್ನು ಆಚರಿಸುವುದು ಈ ದಿನದ ಪ್ರಾಥಮಿಕ ಗುರಿಯಾಗಿದೆ.

ಫೆಬ್ರವರಿ 28 ರಂದು ಸಿ.ವಿ. ರಾಮನ್ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲು ಆಯ್ಕೆ ಮಾಡಲಾಗಿದೆ ಏಕೆಂದರೆ 1928 ರಲ್ಲಿ ಈ ದಿನದಂದು ಡಾ. ರಾಮನ್ ಮತ್ತು ಅವರ ಸಹೋದ್ಯೋಗಿಗಳು ರಾಮನ್ ಪರಿಣಾಮ ಎಂದು ಕರೆಯಲ್ಪಡುವ ಬೆಳಕಿನ ಚದುರುವಿಕೆಯ ವಿದ್ಯಮಾನವನ್ನು ಕಂಡುಹಿಡಿದರು. ಬೆಳಕಿನ ಚದುರುವಿಕೆಯ ತಿಳುವಳಿಕೆಯನ್ನು ಮುಂದುವರೆಸುವಲ್ಲಿ ಈ ಆವಿಷ್ಕಾರವು ನಿರ್ಣಾಯಕವಾಗಿತ್ತು ಮತ್ತು ಇತರ ಅನೇಕ ವೈಜ್ಞಾನಿಕ ಬೆಳವಣಿಗೆಗಳಿಗೆ ಅಡಿಪಾಯ ಹಾಕಿತು. ಡಾ. ಸಿ.ವಿ. ರಾಮನ್ ಅವರ ಕೆಲಸವು ಪೀಳಿಗೆಯ ವಿಜ್ಞಾನಿಗಳಿಗೆ ಸ್ಫೂರ್ತಿ ನೀಡುತ್ತಲೇ ಇದೆ, ಈ ದಿನವನ್ನು ವೈಜ್ಞಾನಿಕ ಪರಿಶೋಧನೆಯ ಮಹತ್ವವನ್ನು ಎತ್ತಿ ತೋರಿಸುವ ಪ್ರಮುಖ ಸಂದರ್ಭವನ್ನಾಗಿ ಮಾಡಿದೆ. ಇದು ರಾಷ್ಟ್ರೀಯ ವಿಜ್ಞಾನ ದಿನದ ಇತಿಹಾಸದ ಮಹತ್ವದ ಭಾಗವಾಗಿದೆ, ಇದು ವೈಜ್ಞಾನಿಕ ಸಾಧನೆಯ ಪರಂಪರೆಯನ್ನು ಆಚರಿಸುವ ಮತ್ತು ಆಧುನಿಕ ವಿಜ್ಞಾನದಲ್ಲಿ ನಾವೀನ್ಯತೆ ಮತ್ತು ಆವಿಷ್ಕಾರವನ್ನು ಪ್ರೋತ್ಸಾಹಿಸುವ ದಿನವಾಗಿದೆ.

## ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆ ಮತ್ತು ಮಹತ್ವ

ನಾವು ಇಂದು ವಾಸಿಸುವ ಜಗತ್ತನ್ನು ರೂಪಿಸುವಲ್ಲಿ ವಿಜ್ಞಾನ ಮತ್ತು ವಿಜ್ಞಾನಿಗಳ ಕೊಡುಗೆಗಳನ್ನು ಆಚರಿಸಲು ಮತ್ತು ಗುರುತಿಸಲು ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಪ್ರತಿ ವರ್ಷ ಫೆಬ್ರವರಿ 28 ರಂದು ಆಚರಿಸಲಾಗುವ ಈ ದಿನವು ಭಾರತದಲ್ಲಿ ವಿಶೇಷ ಮಹತ್ವವನ್ನು ಹೊಂದಿದೆ ಏಕೆಂದರೆ ಇದು 1928 ರಲ್ಲಿ ಡಾ. ಸಿ.ವಿ. ರಾಮನ್ ಅವರ ರಾಮನ್ ಪರಿಣಾಮದ ಕ್ರಾಂತಿಕಾರಿ ಆವಿಷ್ಕಾರವನ್ನು ಗೌರವಿಸುತ್ತದೆ.

ಈ ದಿನವು ಈ ಸ್ಮರಣೀಯ ಸಾಧನೆಯನ್ನು ಸ್ಮರಿಸುತ್ತದೆ ಮಾತ್ರವಲ್ಲದೆ, ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಹಿಸುವ ನಿರ್ಣಾಯಕ ಪಾತ್ರವನ್ನು ನೆನಪಿಸುತ್ತದೆ. ಇದು ಜ್ಞಾನ ಮತ್ತು ನಾವೀನ್ಯತೆಯ ಅನ್ವೇಷಣೆಯನ್ನು ಪ್ರೋತ್ಸಾಹಿಸುತ್ತದೆ, ಯುವ ಮನಸ್ಸುಗಳಲ್ಲಿ ವೈಜ್ಞಾನಿಕ ಕುತೂಹಲದ ಸಂಸ್ಕೃತಿಯನ್ನು ಬೆಳೆಸುತ್ತದೆ.

ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುವ ಮೂಲಕ, ಆರೋಗ್ಯ ರಕ್ಷಣೆ, ಬಾಹ್ಯಾಕಾಶ ಸಂಶೋಧನೆ, ತಂತ್ರಜ್ಞಾನ ಮತ್ತು ಪರಿಸರದಂತಹ ಕ್ಷೇತ್ರಗಳಲ್ಲಿ ವೈಜ್ಞಾನಿಕ ಪ್ರಗತಿಯ ಮಹತ್ವವನ್ನು ನಾವು ಬಲಪಡಿಸುತ್ತೇವೆ, ಪ್ರಗತಿ ಮತ್ತು ಆವಿಷ್ಕಾರದಿಂದ ನಡೆಸಲ್ಪಡುವ ಭವಿಷ್ಯವನ್ನು ಖಚಿತಪಡಿಸುತ್ತೇವೆ. ಈ ದಿನವು ವಿಜ್ಞಾನ ಶಿಕ್ಷಣ ಮತ್ತು ಜಾಗೃತಿಯನ್ನು ಉತ್ತೇಜಿಸುತ್ತದೆ, ವ್ಯಕ್ತಿಗಳು ವೈಜ್ಞಾನಿಕ ವೃತ್ತಿಗಳನ್ನು ಅನ್ವೇಷಿಸಲು ಮತ್ತು ಸಮಾಜದ ಯೋಗಕ್ಷೇಮಕ್ಕೆ ಕೊಡುಗೆ ನೀಡಲು ಪ್ರೇರೇಪಿಸುತ್ತದೆ.

## ರಾಷ್ಟ್ರೀಯ ವಿಜ್ಞಾನ ದಿನದಂದು ನೀಡಲಾಗುವ ಪ್ರಶಸ್ತಿಗಳು

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಕೊಡುಗೆಗಳನ್ನು ಗುರುತಿಸಲು ಹಲವಾರು ಪ್ರಶಸ್ತಿಗಳನ್ನು ನೀಡಲಾಗುತ್ತದೆ:

1 **ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳು** – ವಿಜ್ಞಾನ ಜನಪ್ರಿಯತೆಯಲ್ಲಿನ ಅತ್ಯುತ್ತಮ ಪ್ರಯತ್ನಗಳಿಗಾಗಿ DST ನಿಂದ ನೀಡಲಾಗುತ್ತದೆ .

2 **ರಾಷ್ಟ್ರೀಯ ವಿಜ್ಞಾನ ಪುರಸ್ಕಾರ್** – ನಾಲ್ಕು ವಿಭಾಗಗಳೊಂದಿಗೆ ಹೊಸ ರಾಷ್ಟ್ರೀಯ ಪ್ರಶಸ್ತಿ: **ವಿಜ್ಞಾನ ರತ್ನ, ವಿಜ್ಞಾನ ಶ್ರೀ, ವಿಜ್ಞಾನ ಯುವ, ಮತ್ತು ವಿಜ್ಞಾನ ತಂಡ** .

3 **ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ** – ವಿವಿಧ ವೈಜ್ಞಾನಿಕ ಕ್ಷೇತ್ರಗಳಲ್ಲಿನ ಶ್ರೇಷ್ಠತೆಗಾಗಿ ಪ್ರತಿಷ್ಠಿತ ಪ್ರಶಸ್ತಿ.

4 **ರಾಷ್ಟ್ರೀಯ ವಿಜ್ಞಾನ ಜನಪ್ರಿಯತೆ ಪ್ರಶಸ್ತಿಗಳು** – ವಿಜ್ಞಾನ ಶಿಕ್ಷಣವನ್ನು ಉತ್ತೇಜಿಸುವ ಪ್ರಯತ್ನಗಳನ್ನು ಗುರುತಿಸುತ್ತದೆ.

ದ್ವಿದಳ ಧಾನ್ಯಗಳ ಪೌಷ್ಟಿಕಾಂಶ, ಪರಿಸರ ಮತ್ತು
ಕೃಷಿ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ

# ವಿಶ್ವ ದ್ವಿದಳ ಧಾನ್ಯಗಳ ದಿನ



ಇದು ಜಾಗತಿಕ ಕಾರ್ಯಕ್ರಮವಾಗಿದ್ದು, ವಿಶ್ವಾದ್ಯಂತ ಆಹಾರವಾಗಿ ದ್ವಿದಳ ಧಾನ್ಯಗಳ ಮಹತ್ವವನ್ನು ಎತ್ತಿ ತೋರಿಸಲು ಫೆಬ್ರವರಿ 10 ರಂದು ಆಚರಿಸಲಾಗುತ್ತದೆ. ಈ ದಿನವು ಸಾರ್ವತ್ರಿಕ ಮತ್ತು ಪರಿವರ್ತನಾಶೀಲ ಗುರಿಗಳ ಸಮಗ್ರ, ದೂರಗಾಮಿ ಮತ್ತು ಜನ–ಕೇಂದ್ರಿತ ಸೆಟ್ ಅನ್ನು ಸಾಧಿಸುವಲ್ಲಿ ದ್ವಿದಳ ಧಾನ್ಯಗಳು ವಹಿಸುವ ಮಹತ್ವದ ಪಾತ್ರವನ್ನು ಗುರುತಿಸುತ್ತದೆ.

### ಬೇಳೆಕಾಳುಗಳ ಬಗ್ಗೆ

ಅವುಗಳನ್ನು ದ್ವಿದಳ ಧಾನ್ಯಗಳು ಎಂದು ಕರೆಯಲಾಗುತ್ತದೆ. ದ್ವಿದಳ ಧಾನ್ಯಗಳು ಆಹಾರಕ್ಕಾಗಿ ಬೆಳೆಸುವ ದ್ವಿದಳ ಧಾನ್ಯಗಳ ಖಾದ್ಯ ಬೀಜಗಳಾಗಿವೆ. ಸಾಮಾನ್ಯವಾಗಿ ಸೇವಿಸುವ ದ್ವಿದಳ ಧಾನ್ಯಗಳು ಒಣಗಿದ ಬೀನ್ಸ್, ಮಸೂರ ಮತ್ತು ಬಟಾಣಿಗಳಾಗಿವೆ. ಅಲ್ಲದೆ, ಪ್ರಧಾನ ಭಕ್ಷ್ಯಗಳು ಮತ್ತು ಪಾಕಪದ್ಧತಿಗಳು ಪ್ರಪಂಚದಾದ್ಯಂತ ದ್ವಿದಳ ಧಾನ್ಯಗಳನ್ನು ಒಳಗೊಂಡಿರುತ್ತವೆ. ಹಸಿರು ಬಟಾಣಿ ಮತ್ತು ಹಸಿರು ಬೀನ್ಸ್ ಸೇರಿದಂತೆ ಹಸಿರು ಕೊಯ್ಲು ಮಾಡಿದ ಬೆಳೆಗಳು ದ್ವಿದಳ ಧಾನ್ಯಗಳ ಅಡಿಯಲ್ಲಿ ಬರುವುದಿಲ್ಲ ಮತ್ತು ಅವುಗಳನ್ನು ತರಕಾರಿ ಬೆಳೆಗಳೆಂದು ವರ್ಗೀಕರಿಸಲಾಗಿದೆ. ಇವುಗಳನ್ನು ಹೊರಗಿಡಲಾಗಿದ್ದು, ಮುಖ್ಯವಾಗಿ ಎಣ್ಣೆ ಹೊರತೆಗೆಯಲು ಬಳಸುವ ಬೆಳೆಗಳು ಸೋಯಾಬೀನ್ ಮತ್ತು ನೆಲಗಡಲೆಗಳಾಗಿವೆ. ಮುಖ್ಯವಾಗಿ ಬಿತ್ತನೆ ಉದ್ದೇಶಗಳಿಗಾಗಿ ಬಳಸುವ ದ್ವಿದಳ ಧಾನ್ಯದ ಬೆಳೆಗಳಲ್ಲಿ ಕ್ಲೋವರ್ ಮತ್ತು ಅಲ್ಫಲ್ಫಾ ಬೀಜಗಳು ಸೇರಿವೆ. ದ್ವಿದಳ ಧಾನ್ಯಗಳ ಮೊದಲ ಪುರಾವೆಗಳು 11,000 ವರ್ಷಗಳ ಹಿಂದೆ ಮಧ್ಯಪ್ರಾಚ್ಯದ ಒಂದು ಪ್ರದೇಶವಾದ ಫಲವತ್ತಾದ ಅರ್ಧಚಂದ್ರಾಕಾರದಿಂದ ಬಂದಿವೆ ಮತ್ತು ಇದು ಕೆಲವು ಆರಂಭಿಕ ಮಾನವ ನಾಗರಿಕತೆಗಳಿಗೆ ನೆಲೆಯಾಗಿತ್ತು. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO) 11 ವಿಧದ ದ್ವಿದಳ ಧಾನ್ಯಗಳನ್ನು ಗುರುತಿಸುತ್ತದೆ, ಒಣ ಬೀನ್ಸ್, ಒಣ ಬಟಾಣಿ, ಕಡಲೆ, ಹಸಿ ಬಟಾಣಿ, ತೊಗರಿ ಬೇಳೆ, ಮಸೂರ, ಬಂಬರ ಬೀನ್ಸ್, ವೆಚ್ಚಗಳು, ಲುಪಿನ್ಗಳು ಮತ್ತು ದ್ವಿದಳ ಧಾನ್ಯಗಳು.

### ವಿಶ್ವ ದ್ವಿದಳ ಧಾನ್ಯಗಳ ದಿನದ ಇತಿಹಾಸ

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಡಿಸೆಂಬರ್ 20, 2013 ರಂದು 2016 ಅನ್ನು ಅಂತರರಾಷ್ಟ್ರೀಯ ದ್ವಿದಳ ಧಾನ್ಯಗಳ ವರ್ಷವೆಂದು ಘೋಷಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ವರ್ಷದ ಆಚರಣೆಯನ್ನು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ನೇತೃತ್ವ ವಹಿಸಿತ್ತು. ಸಾಮಾನ್ಯ ಸಭೆಯು 2019 ರಲ್ಲಿ A/RES/73/251 ನಿರ್ಣಯವನ್ನು ಅಂಗೀಕರಿಸುವ ಮೂಲಕ ಫೆಬ್ರವರಿ 10 ಅನ್ನು ವಿಶ್ವ ದ್ವಿದಳ ಧಾನ್ಯಗಳ ದಿನವನ್ನಾಗಿ ಆಚರಿಸಲು ಘೋಷಿಸಿತು.

### ದ್ವಿದಳ ಧಾನ್ಯಗಳ ಮಹತ್ವ

ದ್ವಿದಳ ಧಾನ್ಯಗಳು ಸುಸ್ಥಿರ ಕೃಷಿ–ಆಹಾರ ವ್ಯವಸ್ಥೆಗಳಿಗೆ ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಅವಕಾಶಗಳನ್ನು ಸೃಷ್ಟಿಸಲು ಕೊಡುಗೆ ನೀಡುತ್ತವೆ. ದ್ವಿದಳ ಧಾನ್ಯಗಳು ಪೋಷಕಾಂಶಗಳಿಂದ ಸಮೃದ್ಧವಾಗಿವೆ. ಅವು ಪ್ರೋಟೀನ್ನ

ಮೂಲವಾಗಿವೆ. ಅವು ಕಡಿಮೆ ಕೊಬ್ಬು ಮತ್ತು ನಾರಿನಂಶವನ್ನು ಹೊಂದಿರುತ್ತವೆ, ಆದ್ದರಿಂದ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಮತ್ತು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಅವು ಬೊಜ್ಜುತನವನ್ನು ಎದುರಿಸಲು ಸಹಾಯ ಮಾಡುತ್ತವೆ. ಮಧುಮೇಹ ಮತ್ತು ಹೃದಯ ಸ್ಥಿತಿಗಳು ಸೇರಿದಂತೆ ಸಾಂಕ್ರಾಮಿಕವಲ್ಲದ ಕಾಯಿಲೆಗಳ ನಿರ್ವಹಣೆಗೆ ಆರೋಗ್ಯ ಸಂಸ್ಥೆಗಳು ಸಹ ದ್ವಿದಳ ಧಾನ್ಯಗಳನ್ನು ಶಿಫಾರಸು ಮಾಡುತ್ತವೆ. ದ್ವಿದಳ ಧಾನ್ಯಗಳು ಹೆಚ್ಚಿನ ಫೈಬರ್ ಅಂಶವನ್ನು ಹೊಂದಿರುತ್ತವೆ ಮತ್ತು ಕಡಿಮೆ ಗ್ಲೈಸೆಮಿಕ್ ಸೂಚಿಯನ್ನು ಹೊಂದಿರುತ್ತವೆ. ಭದ್ರತಾ ಉದ್ದೇಶಗಳಿಗಾಗಿ ಬೇಳೆಕಾಳುಗಳು ಮುಖ್ಯ. ರೈತರು ಬೇಳೆಕಾಳುಗಳನ್ನು ಮಾರಾಟ ಮಾಡುತ್ತಾರೆ ಮತ್ತು ಅವುಗಳನ್ನು ಸೇವಿಸುತ್ತಾರೆ. ಈ ರೀತಿಯಾಗಿ, ಅವರು ಮನೆಯ ಭದ್ರತೆಯನ್ನು ಕಾಪಾಡಿಕೊಳ್ಳುತ್ತಾರೆ ಮತ್ತು ಆರ್ಥಿಕ ಸ್ಥಿರತೆಯನ್ನು ಸೃಷ್ಟಿಸುತ್ತಾರೆ. ದ್ವಿದಳ ಧಾನ್ಯಗಳು ಹವಾಮಾನ ಸ್ನೇಹಿಯಾಗಿರುತ್ತವೆ. ದ್ವಿದಳ ಧಾನ್ಯಗಳ ಸಾರಜನಕ ಸ್ಥಿರೀಕರಣ ಗುಣಲಕ್ಷಣಗಳು ಮಣ್ಣಿನ ಫಲವತ್ತತೆಯನ್ನು ಸುಧಾರಿಸಲು ಮತ್ತು ಕೃಷಿ ಭೂಮಿಯ ಉತ್ಪಾದಕತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.  ಮಣ್ಣಿಗೆ ಕೃತಕವಾಗಿ ಸಾರಜನಕವನ್ನು ಒದಗಿಸಲು ಬಳಸುವ ಸಂಶ್ಲೇಷಿತ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ದ್ವಿದಳ ಧಾನ್ಯಗಳು ಹವಾಮಾನ ಬದಲಾವಣೆ ತಗ್ಗಿಸುವಿಕೆಗೆ ಕೊಡುಗೆ ನೀಡುತ್ತವೆ. ದ್ವಿದಳ ಧಾನ್ಯಗಳು ಕಬ್ಬಿಣ, ಸತು, ಫೋಲೇಟ್ ಮತ್ತು ಮೆಗ್ನೀಸಿಯಮ್ನಂತಹ ಜೀವಸತ್ವಗಳು ಮತ್ತು ಖನಿಜಗಳ ಪ್ರಮುಖ ಮೂಲವಾಗಿದೆ. ದಿನಕ್ಕೆ ಅರ್ಧ ಕಪ್ ಬೀನ್ಸ್ ಅಥವಾ ಬಟಾಣಿ ಸೇವಿಸುವುದರಿಂದ ಈ ಪೋಷಕಾಂಶಗಳ ಸೇವನೆಯನ್ನು ಹೆಚ್ಚಿಸುವ ಮೂಲಕ ಆಹಾರದ ಗುಣಮಟ್ಟವನ್ನು ಹೆಚ್ಚಿಸಬಹುದು ಎಂದು ಹೇಳಲಾಗುತ್ತದೆ.

**ಬೇಳೆಕಾಳುಗಳ ಆರೋಗ್ಯ ಪ್ರಯೋಜನಗಳು**


1. ಮಧುಮೇಹ ಇರುವವರಿಗೆ ಅಧಿಕ ನಾರಿನ ಅಂಶ ಮತ್ತು ಕಡಿಮೆ ಕಾರ್ಬೋಹೈಡ್ರೇಟ್ ಅಂಶವಿರುವ ಬೇಳೆಕಾಳುಗಳು ಸೇವನೆಯೂ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಇದು ಆರೋಗ್ಯಕರ ರಕ್ತದ ಸಕ್ಕರೆ ಮಟ್ಟ ಮತ್ತು ಇನ್ಸುಲಿನ್ ಮಟ್ಟ ಕಾಪಾಡಲು ಸಹಕಾರಿಯಾಗಿದೆ.
2. ಬೇಳೆಕಾಳುಗಳಲ್ಲಿ ಪೈಥೊಸ್ಟ್ರೋಷನ್ ಹೇರಳವಾಗಿದ್ದು, ಇದು ಹಾರ್ಮೋನ್ ಸಂಬಂಧಿ ಕ್ಯಾನ್ಸರ್‌ಗಳಾದ ಸ್ತನ ಕ್ಯಾನ್ಸರ್ ಮತ್ತು ಜನನೇಂದ್ರಿಯ ಕ್ಯಾನ್ಸರ್ ಬರದಂತೆ ತಡೆಯುತ್ತದೆ.
3. ಬೇಳೆ ಕಾಳುಗಳು ಕಡಿಮೆ ಕ್ಯಾಲೋರಿ ಹೊಂದಿದ್ದು ತೂಕ ಕಳೆದುಕೊಳ್ಳಲು ಬಯಸುವವರಿಗೆ ಇದು ಉತ್ತಮ ಆಹಾರವಾಗಿದೆ. ಇದರಲ್ಲಿರುವ ಕಬ್ಬಿಣ ಅಂಶವು ದೇಹಕ್ಕೆ ಆಮ್ಲಜನಕವನ್ನು ಸಾಗಿಸಲು, ದೇಹದ ಚಯಾಪಚಯ ಕ್ರಿಯೆ ಸುಗಮವಾಗಿ ನಡೆಯುವಂತೆ ಮಾಡುತ್ತದೆ.
4. ಬೇಳೆಕಾಳಿನಲ್ಲಿರುವ ಅಧಿಕ ನಾರಿನ ಅಂಶವು ಜೀರ್ಣಸಂಬಂಧಿ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ನಿಯಂತ್ರಣಕ್ಕೆ ಸಹಕಾರಿಯಾಗಿದೆ ಇದು ರಕ್ತದ ಕೊಲೆಸ್ಟ್ರಾಲ್ ಅಂಶವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ.

ಮನೆ ಮದ್ದು :

ಕಫದ ಕೆಮ್ಮು ಇದ್ದರೆ ಎರಡೂ ಹೊತ್ತು ಊಟದ ಬಳಿಕ ಒಂದೆರಡು ಚಮಚ ಜೇನುತುಪ್ಪ ಸೇವಿಸಿ.

ರೇಡಿಯೊ ಮಹತ್ವದ ಬಗ್ಗೆ ಜನ ಜಾಗೃತಿ ಮೂಡಿಸುವ ಮತ್ತು
ರೇಡಿಯೊ ಮೂಲಕ ಮಾಹಿತಿ- ಪ್ರಸಾರವನ್ನು ಉತ್ತೇಜಿಸುವ

# ವಿಶ್ವ ರೇಡಿಯೋ ದಿನ



ದೂರದರ್ಶನ ಮತ್ತು ಸ್ಮಾರ್ಟ್‌ಫೋನ್‌ಗಳು ಜಗತ್ತನ್ನು ಆಕ್ರಮಿಸಿಕೊಂಡಿದ್ದರೂ, ಸಂಗೀತ ಮಾಧ್ಯಮ, ಪ್ರಯಾಣದ ಒಡನಾಡಿ ಮತ್ತು ಸಮುದಾಯ ರೇಡಿಯೊ ಮೂಲಕ ಧ್ವನಿ ಎತ್ತುವ ರೂಪದಲ್ಲಿ ರೇಡಿಯೋ ಇನ್ನೂ ಖ್ಯಾತಿ ಪಡೆದಿದೆ.

ಮುದ್ರಣ ಮಾಧ್ಯಮವು ವಿಶ್ವದ ಮೊದಲ ಸಮೂಹ ಮಾಧ್ಯಮವಾಗಿತ್ತು. ಆದಾಗ್ಯೂ, ತಾಂತ್ರಿಕ ಪ್ರಗತಿಯೊಂದಿಗೆ, ರೇಡಿಯೋ ಅತ್ಯಂತ ಜನಪ್ರಿಯ ಪ್ರಸಾರ ಮಾಧ್ಯಮವಾಗಿ ಹೊರಹೊಮ್ಮಿತು. ಪತ್ರಿಕೆಗಳು ಮತ್ತು ಜಾಹೀರಾತುಗಳನ್ನು ಓದುವುದು ಸವಾಲಿನದ್ದಾಗಿದ್ದರೂ ಆದರೆ ಆಡಿಯೊ ಸಂದೇಶಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲವರಿಗೆ ಮಾಹಿತಿಯನ್ನು ಪ್ರಸಾರ ಮಾಡಲು ವಿನ್ಯಾಸಗೊಳಿಸಲಾದ ರೇಡಿಯೋ ಸಂವಹನಕ್ಕೆ ಪ್ರಬಲ ಸಾಧನವಾಯಿತು. ಅದರ ಮಹತ್ವವನ್ನು ಗುರುತಿಸಲು ಮತ್ತು ಜಾಗೃತಿ ಮೂಡಿಸಲು, ಪ್ರತಿ ವರ್ಷ ಫೆಬ್ರವರಿ 13 ರಂದು ವಿಶ್ವ ರೇಡಿಯೋ ದಿನವನ್ನು ಆಚರಿಸಲಾಗುತ್ತದೆ.

ಸಾಮಾಜಿಕ ಮಾಧ್ಯಮ ಮತ್ತು ವಾಟ್ಸಾಪ್‌ನಂತಹ ತ್ವರಿತ ಸಂದೇಶ ಕಳುಹಿಸುವ ಅಪ್ಲಿಕೇಶನ್‌ಗಳಿಂದ ಪ್ರಾಬಲ್ಯ ಹೊಂದಿರುವ ಯುಗದಲ್ಲಿಯೂ ಸಹ, ರೇಡಿಯೋ ಅತ್ಯಂತ ಸ್ಥಿತಿಸ್ಥಾಪಕ ಮತ್ತು ದೂರಗಾಮಿ ಸಂವಹನ ಮಾಧ್ಯಮವಾಗಿ ಉಳಿದಿದೆ. ವಿಶ್ವ ರೇಡಿಯೋ ದಿನ ಬಂದಿರುವುದರಿಂದ, ಅದರ ಇತಿಹಾಸ, ಮಹತ್ವ ಮತ್ತು ಪ್ರಮುಖ ಸಂಗತಿಗಳನ್ನು ಅನ್ವೇಷಿಸೋಣ.

ಈ ವರ್ಷ, ವಿಶ್ವ ರೇಡಿಯೋ ದಿನವು "ರೇಡಿಯೋ ಮತ್ತು ಹವಾಮಾನ ಬದಲಾವಣೆ" ಎಂಬ ವಿಷಯದ ಮೇಲೆ ಕೇಂದ್ರೀಕರಿಸುತ್ತದೆ, ಇದು ಈ ತುರ್ತು ವಿಷಯದ ಕುರಿತು ರೇಡಿಯೋ ಕೇಂದ್ರಗಳ ಪತ್ರಿಕೋದ್ಯಮ ವರದಿಯನ್ನು ಬೆಂಬಲಿಸುತ್ತದೆ. ಹವಾಮಾನ ಬದಲಾವಣೆಯ ಬಗ್ಗೆ ಪ್ರಮುಖ ಮಾಹಿತಿಯನ್ನು ಹರಡುವಲ್ಲಿ, ಪರಿಸರ ಸುಸ್ಥಿರತೆಗಾಗಿ ಪ್ರತಿಪಾದಿಸುವ ಧ್ವನಿಗಳನ್ನು ವರ್ಧಿಸುವಲ್ಲಿ ಮತ್ತು ಪರಿಸರ ಸ್ನೇಹಿ ಅಭ್ಯಾಸಗಳನ್ನು ಉತ್ತೇಜಿಸುವಲ್ಲಿ ರೇಡಿಯೊದ ಪಾತ್ರವನ್ನು ಎತ್ತಿ ತೋರಿಸುತ್ತದೆ.

**ವಿಶ್ವ ರೇಡಿಯೋ ದಿನದ ಇತಿಹಾಸ**

ನಿರ್ದಿಷ್ಟ ಬ್ಯಾಂಡ್‌ವಿಡ್ತ್‌ನಲ್ಲಿ ಸಂದೇಶಗಳನ್ನು ಕಳುಹಿಸಲು ಧ್ವನಿ ತರಂಗಗಳು ಮತ್ತು ಸಂಕೇತಗಳನ್ನು ಬಳಸುವ ರೇಡಿಯೋ, 19 ನೇ ಶತಮಾನದ ಅಂತ್ಯದಲ್ಲಿ ಪ್ರಪಂಚದಾದ್ಯಂತ ಪ್ರಾರಂಭವಾಯಿತು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ರೇಡಿಯೋ ಭಾರತಕ್ಕೆ ಬಂದಿತು ಆದಾಗ್ಯೂ, ಇದು ಸಮೂಹ ಮಾಧ್ಯಮದ ಅತ್ಯಂತ ಜನಪ್ರಿಯ ರೂಪವಾಗಲು ಹಲವಾರು ವರ್ಷಗಳು ಬೇಕಾಯಿತು. ಅದರ ಜನಪ್ರಿಯತೆಯನ್ನು ಕಾಪಾಡಿಕೊಳ್ಳಲು ಮತ್ತು ಎಲ್ಲರಲ್ಲೂ ಅದರ ಬಳಕೆಯನ್ನು ಉತ್ತೇಜಿಸಲು, ವಿಶ್ವ ರೇಡಿಯೋ ದಿನವನ್ನು ವಿಶ್ವಾದ್ಯಂತ ಘೋಷಿಸಲಾಯಿತು. 2011 ರಲ್ಲಿ ಯುನೆಸ್ಕೋ ಸದಸ್ಯ ರಾಷ್ಟ್ರಗಳು ಇದನ್ನು ಘೋಷಿಸಿದವು ಮತ್ತು 2012 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಿಂದ ಅಂತರರಾಷ್ಟ್ರೀಯ ದಿನವಾಗಿ

ಅಂಗೀಕರಿಸಲ್ಪಟ್ಟವು, ವಿಶ್ವ ರೇಡಿಯೋ ದಿನವನ್ನು ಮೊದಲು ಫೆಬ್ರವರಿ 13 ರಂದು ಆಚರಿಸಲಾಯಿತು. ಈ ದಿನವು ಸಮುದಾಯಗಳನ್ನು ಸಂಪರ್ಕಿಸುವಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉತ್ತೇಜಿಸುವಲ್ಲಿ ಮತ್ತು ವಿಪತ್ತುಗಳು ಮತ್ತು ತುರ್ತು ಸಂದರ್ಭಗಳಲ್ಲಿ ಜೀವಸೆಲೆಯಾಗಿ ಕಾರ್ಯನಿರ್ವಹಿಸುವಲ್ಲಿ ಈ ಮಾಧ್ಯಮದ ಸ್ಥಿತಿಸ್ಥಾಪಕತ್ವವನ್ನು ನಮಗೆ ನೆನಪಿಸುತ್ತದೆ.

## ವಿಶ್ವ ರೇಡಿಯೋ ದಿನದ ಮಹತ್ವ

ವಿಶ್ವ ರೇಡಿಯೋ ದಿನವನ್ನು ಆಚರಿಸುವ ಪ್ರಮುಖ ಉದ್ದೇಶ ಜನರಿಗೆ ರೇಡಿಯೊದ ಮಹತ್ವವನ್ನು ಅರಿತುಕೊಳ್ಳುವುದು. ದೂರದರ್ಶನ ಮತ್ತು ಸ್ಮಾರ್ಟ್‌ಫೋನ್‌ಗಳು ಜಗತ್ತನ್ನು ಆಕ್ರಮಿಸಿಕೊಂಡಿದ್ದರೂ, ರೇಡಿಯೋ ಸಂಗೀತ ಮಾಧ್ಯಮ, ಪ್ರಯಾಣದ ಒಡನಾಡಿ ಮತ್ತು ಸಮುದಾಯ ರೇಡಿಯೊ ಮೂಲಕ ಸಮುದಾಯದ ಧ್ವನಿಯನ್ನು ಎತ್ತುವ ರೂಪದಲ್ಲಿ ಇನ್ನೂ ಖ್ಯಾತಿಯನ್ನು ಹೊಂದಿದೆ. ಇದಲ್ಲದೆ, ತುರ್ತು ಸಂದರ್ಭಗಳಲ್ಲಿ ರೇಡಿಯೋ ವಿಶ್ವಾಸಾರ್ಹ ಮಾಹಿತಿಯ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಹವಾಮಾನ ಬದಲಾವಣೆಯಂತಹ ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಪ್ರಾತಿನಿಧ್ಯವಿಲ್ಲದ ಧ್ವನಿಗಳಿಗೆ ವೇದಿಕೆಯನ್ನು ಒದಗಿಸುತ್ತದೆ. ಈ ದಿನವು ಶಿಕ್ಷಣ ಮತ್ತು ಜಾಗೃತಿಯನ್ನು ಬೆಳೆಸುವ ಮೂಲಕ ಸಂಸ್ಕೃತಿಗಳಲ್ಲಿ ಸಂವಾದ ಮತ್ತು ಪರಸ್ಪರ ತಿಳುವಳಿಕೆಯನ್ನು ಉತ್ತೇಜಿಸುತ್ತದೆ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ.

## ವಿಶ್ವ ರೇಡಿಯೋ ದಿನದ ಪ್ರಮುಖ ಸಂಗತಿಗಳು

1. ಮೊದಲ ನಿಜವಾದ ರೇಡಿಯೋ ಪ್ರಸರಣವನ್ನು 1895 ರಲ್ಲಿ ಗುಗ್ಲಿಯೆಲ್ಮೊ ಮಾರ್ಕೋನಿ ನಡೆಸಿದರು.
2. ಭಾರತದ ರೇಡಿಯೋ ಪ್ರಸಾರ ಇತಿಹಾಸವು 1920 ರ ದಶಕದ ಆರಂಭದಷ್ಟು ಹಿಂದಕ್ಕೆ ಹೋಗುತ್ತದೆ.
3. ಭಾರತದಲ್ಲಿ ಮೊದಲ ರೇಡಿಯೋ ಪ್ರಸಾರವನ್ನು ಜೂನ್ 1923 ರಲ್ಲಿ ಬಾಂಬೆ ರೇಡಿಯೋ ಕ್ಲಬ್ ನಡೆಸಿತು.
4. ಮೊದಲ ಸುದ್ದಿ ಬುಲೆಟಿನ್ ಅನ್ನು ಜನವರಿ 19, 1936 ರಂದು ಆಲ್ ಇಂಡಿಯಾ ರೇಡಿಯೋ (AIR) ಪ್ರಸಾರ ಮಾಡಿತು.
5. ಭಾರತದ ಮೊದಲ ರೇಡಿಯೋ ಕೇಂದ್ರ ಆಕಾಶವಾಣಿ. ನಂತರ ಇದನ್ನು 1957 ರಲ್ಲಿ ಆಲ್ ಇಂಡಿಯಾ ರೇಡಿಯೋದ ಪ್ರಸಾರದ ಹೆಸರಾಗಿ ಕರೆಯಲಾಯಿತು.
6. ಸುಮಾರು 23 ಭಾಷೆಗಳು ಮತ್ತು 146 ಉಪಭಾಷೆಗಳಲ್ಲಿ 415 ಕ್ಕೂ ಹೆಚ್ಚು ರೇಡಿಯೋ ಕೇಂದ್ರಗಳನ್ನು ಹೊಂದಿರುವ AIR, ವಿಶ್ವದ ಅತಿದೊಡ್ಡ ರೇಡಿಯೋ ಪ್ರಸಾರಕಗಳಲ್ಲಿ ಒಂದಾಗಿದೆ. ಇದು ಶೇಕಡ 99 ರಷ್ಟು ಜನಸಂಖ್ಯೆಯ ವ್ಯಾಪ್ತಿಯನ್ನು ಮತ್ತು 18 FM ಚಾನೆಲ್‌ಗಳನ್ನು ಹೊಂದಿದೆ.
7. ರೇಡಿಯೋ ತರಂಗಗಳು ಗಾಳಿಯ ಮೂಲಕ ಚಲಿಸುವ ಮತ್ತು ದೂರದವರೆಗೆ ಮಾಹಿತಿಯನ್ನು ರವಾನಿಸಬಲ್ಲ ವಿದ್ಯುತ್ಕಾಂತೀಯ ಶಕ್ತಿಯ ಒಂದು ರೂಪವಾಗಿದೆ.
8. 1860 ರ ದಶಕದಲ್ಲಿ, ಸ್ಕಾಟಿಷ್ ವಿಜ್ಞಾನಿ ಜೇಮ್ಸ್ ಕ್ಲರ್ಕ್ ಮ್ಯಾಕ್ವೆಲ್ ರೇಡಿಯೋ ತರಂಗಗಳ ಅಸ್ತಿತ್ವವನ್ನು ಊಹಿಸಿದರು.

ॐ

**ರಾಷ್ಟ್ರಗಳ ಒಳಗೆ ಶಾಂತಿಯುತ ಮತ್ತು ಸಮೃದ್ಧ ಸಹಬಾಳ್ವೆಗೆ ಆಧಾರವಾಗಿರುವ ತತ್ವ**

# ವಿಶ್ವ ಸಾಮಾಜಿಕ ನ್ಯಾಯ ದಿನ



ಪ್ರತಿ ವರ್ಷ ಫೆಬ್ರವರಿ 20 ರಂದು ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಸಾಮಾಜಿಕ ಕಲ್ಯಾಣಕ್ಕೆ ಬೆದರಿಕೆಗಳನ್ನುಂಟುಮಾಡುವ ಅನ್ಯಾಯಗಳು ಮತ್ತು ಕಾರ್ಮಿಕ ಅಭದ್ರತೆಯನ್ನು ಗುರಿಯಾಗಿಸಿಕೊಂಡು ಸಮಾನತೆ ಆಧಾರಿತ ಸಮಾಜಗಳನ್ನು ರಚಿಸುವ ಮಹತ್ವವನ್ನು ಎತ್ತಿ ತೋರಿಸುವ ಗುರಿಯನ್ನು ಈ ದಿನ ಹೊಂದಿದೆ.

ವಿಶ್ವ ಸಾಮಾಜಿಕ ನ್ಯಾಯ ದಿನದ ಧ್ಯೇಯವಾಕ್ಯ "ಸಬಲೀಕರಣ ಸೇರ್ಪಡೆ, ಸಾಮಾಜಿಕ ನ್ಯಾಯಕ್ಕಾಗಿ ಅಂತರವನ್ನು ಕಡಿಮೆ ಮಾಡುವುದು". ಇದು ವ್ಯವಸ್ಥಿತ ಅಸಮಾನತೆಯನ್ನು ನಿರ್ವಹಿಸುವಲ್ಲಿ ಅಂತರ್ಗತ ನೀತಿಗಳು ಮತ್ತು ಸಾಮಾಜಿಕ ರಕ್ಷಣೆಯ ಮಹತ್ವವನ್ನು ಒತ್ತಿಹೇಳುತ್ತದೆ. ವಿಶ್ವ ಸವಾಲುಗಳನ್ನು ಎದುರಿಸುವಲ್ಲಿ ಪಾಲುದಾರಿಕೆ ಮತ್ತು ಕೊಡುಗೆಯನ್ನು ಎತ್ತಿ ತೋರಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು ಪ್ರತಿ ವರ್ಷ ವಿಶ್ವ ಸಾಮಾಜಿಕ ದಿನದ ಧ್ಯೇಯವಾಕ್ಯವನ್ನು ಘೋಷಿಸುತ್ತದೆ.

**ವಿಶ್ವ ಸಾಮಾಜಿಕ ನ್ಯಾಯ ದಿನದ ಇತಿಹಾಸ**

ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ನವೆಂಬರ್ 26, 2007 ರಂದು ಮಹತ್ವದ ದಿನವೆಂದು ಘೋಷಿಸಿತು. ಫೆಬ್ರವರಿ 20 ಅನ್ನು ಈ ದಿನವನ್ನು ಆಚರಿಸಲು ಆಯ್ಕೆ ಮಾಡಲಾಯಿತು. ಜೂನ್ 10, 2008 ರಂದು, ನ್ಯಾಯಯುತ ಜಾಗತೀಕರಣಕ್ಕಾಗಿ ಸಾಮಾಜಿಕ ನ್ಯಾಯಕ್ಕಾಗಿ ಐಎಲ್‌ಒ ಘೋಷಣೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1995 ರಲ್ಲಿ, ಡೆನ್ಮಾರ್ಕ್ನ ಕೋಪನ್ಹೇಗನ್ನಲ್ಲಿ ಸಾಮಾಜಿಕ ಅಭಿವೃದ್ಧಿಗಾಗಿ ವಿಶ್ವ ಶೃಂಗಸಭೆ ನಡೆಯಿತು, ಅಲ್ಲಿ 100 ಕ್ಕೂ ಹೆಚ್ಚು ರಾಜಕೀಯ ನಾಯಕರು ಬಡತನದ ವಿರುದ್ಧ ಹೋರಾಡಲು, ಪೂರ್ಣ ಉದ್ಯೋಗವನ್ನು ಖಚಿತಪಡಿಸಿಕೊಳ್ಳಲು ಮತ್ತು ಸ್ಥಿರ, ಸುರಕ್ಷಿತ ಸಮಾಜಗಳನ್ನು ಸೃಷ್ಟಿಸಲು ಬದ್ಧರಾಗಿದ್ದರು. ಅಭಿವೃದ್ಧಿ ಯೋಜನೆಗಳ ಕೇಂದ್ರಬಿಂದು ಜನರು ಆಗಿರಬೇಕು ಎಂದು ಅವರು ಒಪ್ಪಿಕೊಂಡರು.

ಫೆಬ್ರವರಿಯಲ್ಲಿ, UN ಸದಸ್ಯ ರಾಷ್ಟ್ರಗಳು ಕೋಪನ್ ಹ್ಯಾಗನ್ ಘೋಷಣೆಯನ್ನು ಪರಿಶೀಲಿಸಿದವು ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಮತ್ತಷ್ಟು ಮುನ್ನಡೆಸುವ ಮಾರ್ಗಗಳನ್ನು ಚರ್ಚಿಸಿದವು. ನವೆಂಬರ್ 26, 2007 ರಂದು, UN ಜನರಲ್ ಅಸೆಂಬ್ಲಿ ಫೆಬ್ರವರಿ 20 ಅನ್ನು ವಿಶ್ವ ಸಾಮಾಜಿಕ ನ್ಯಾಯ ದಿನವೆಂದು ಘೋಷಿಸಿತು, ಇದನ್ನು ಮೊದಲು 2009 ರಲ್ಲಿ ಆದರಿಸಲಾಯಿತು.

ಸಾಮಾಜಿಕ ಅಭಿವೃದ್ಧಿಯು ರಾಷ್ಟ್ರಗಳ ಒಳಗೆ ಮತ್ತು ಅವುಗಳ ನಡುವಿನ ನ್ಯಾಯ, ಒಗ್ಗಟ್ಟು, ಸಾಮರಸ್ಯ ಮತ್ತು ಸಮಾನತೆಯ ಮೇಲೆ ಕೇಂದ್ರೀಕರಿಸಬೇಕು ಎಂದು ವಿಶ್ವ ಶೃಂಗಸಭೆಯು ಒತ್ತಿಹೇಳಿತು. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ನ್ಯಾಯಸಮ್ಮತತೆಯು ಎಲ್ಲಾ ಸಮಾಜಗಳಿಗೆ ಅತ್ಯಗತ್ಯ ಮೌಲ್ಯಗಳಾಗಿವೆ. ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಚೌಕಟ್ಟುಗಳನ್ನು ರಚಿಸುವುದು, ಸಮಾನ ಉದ್ಯೋಗಾವಕಾಶಗಳು,

ನ್ಯಾಯಯುತ ಆದಾಯ ವಿತರಣೆ ಮತ್ತು ಎಲ್ಲರಿಗೂ ಸಂಪನ್ಮೂಲಗಳ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರಗಳ ಜವಾಬ್ದಾರಿಯಾಗಿದೆ.

## ವಿಶ್ವ ಸಾಮಾಜಿಕ ನ್ಯಾಯ ದಿನದ ಮಹತ್ವ

**ಮೂಲಭೂತ ತತ್ವ:** ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡುವುದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನೀತಿಗಳ ಪ್ರಮುಖ ಗುರಿಯಾಗಿರಬೇಕು ಎಂಬ ಕಲ್ಪನೆಯನ್ನು ಆಧರಿಸಿ ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆಯನ್ನು ನಡೆಸಲಾಗುತ್ತದೆ.

**ವಿಶ್ವಸಂಸ್ಥೆಯ ದೃಷ್ಟಿಕೋನ:** ವಿಶ್ವಸಂಸ್ಥೆಯು (UN) ಯೋಗ್ಯ ಕೆಲಸವನ್ನು ಮುನ್ನಡೆಸುವ ಮತ್ತು ನ್ಯಾಯಯುತ ಜಾಗತೀಕರಣ ಕಾರ್ಯಸೂಚಿಯನ್ನು ಉತ್ತೇಜಿಸುವ ಮಹತ್ವವನ್ನು ಎತ್ತಿ ತೋರಿಸುತ್ತದೆ. ಸಾಮಾಜಿಕ ನ್ಯಾಯವನ್ನು ಮುಂಚೂಣಿಯಲ್ಲಿಡಲು ಅಗತ್ಯ ಹಕ್ಕುಗಳು, ಉದ್ಯೋಗಾವಕಾಶಗಳು, ಸಾಮಾಜಿಕ ರಕ್ಷಣೆಗಳು ಮತ್ತು ಸರ್ಕಾರಗಳು, ಉದ್ಯೋಗದಾತರು ಮತ್ತು ಕಾರ್ಮಿಕರ ನಡುವೆ ರಚನಾತ್ಮಕ ಸಾಮಾಜಿಕ ಸಂವಾದ ಅಗತ್ಯ ಎಂದು ಪ್ರತಿಪಾದಕರು ಒತ್ತಿ ಹೇಳುತ್ತಾರೆ.

**ನಿರಂತರ ಸವಾಲುಗಳು:** ಪ್ರಯತ್ನಗಳ ಹೊರತಾಗಿಯೂ, ಅನ್ಯಾಯಗಳ ನಿರಂತರತೆ, ವ್ಯಾಪಕ ಕಾರ್ಮಿಕ ಅಭದ್ರತೆ, ಹೆಚ್ಚುತ್ತಿರುವ ಅಸಮಾನತೆ ಮತ್ತು ದುರ್ಬಲಗೊಂಡ ಸಾಮಾಜಿಕ ಒಪ್ಪಂದಗಳನ್ನು ವಿಶ್ವಸಂಸ್ಥೆ ಒಪ್ಪಿಕೊಂಡಿದೆ, ಇವೆಲ್ಲವೂ ಜಾಗತಿಕ ಬಿಕ್ಕಟ್ಟುಗಳಿಂದ ಉಲ್ಬಣಗೊಂಡಿವೆ.

**ಶಾಂತಿ ಮತ್ತು ಭದ್ರತೆಗೆ ಲಿಂಕ್:** ರಾಷ್ಟ್ರಗಳ ಒಳಗೆ ಮತ್ತು ರಾಷ್ಟ್ರಗಳ ನಡುವೆ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳಲು ಸಾಮಾಜಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಅತ್ಯಗತ್ಯ. ಆದಾಗ್ಯೂ, ಶಾಂತಿ, ಭದ್ರತೆ ಮತ್ತು ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳದೆ ಈ ಗುರಿಗಳನ್ನು ಸಾಧಿಸಲಾಗುವುದಿಲ್ಲ.

**ಜಾಗತೀಕರಣದ ಪರಿಣಾಮ:** ಜಾಗತೀಕರಣ ಮತ್ತು ಪರಸ್ಪರ ಸಂಬಂಧವು ವ್ಯಾಪಾರ, ಹೂಡಿಕೆ, ಬಂಡವಾಳ ಹರಿವುಗಳು ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ತಾಂತ್ರಿಕ ಪ್ರಗತಿಗಳ ಮೂಲಕ ಹೊಸ ಅವಕಾಶಗಳನ್ನು ನೀಡುತ್ತಿದ್ದರೂ, ಪ್ರಮುಖ ಸವಾಲುಗಳು ಉಳಿದಿವೆ. ಇವುಗಳಲ್ಲಿ ಆರ್ಥಿಕ ಬಿಕ್ಕಟ್ಟುಗಳು, ಅಭದ್ರತೆ, ಬಡತನ, ಹೊರಗಿಡುವಿಕೆ ಮತ್ತು ಸಮಾಜಗಳ ಒಳಗೆ ಮತ್ತು ಅವುಗಳ ನಡುವಿನ ಅಸಮಾನತೆ, ಹಾಗೆಯೇ ಮತ್ತಷ್ಟು ಏಕೀಕರಣ ಮತ್ತು ಸಾಮರ್ಥ್ಯದ ಪೂರ್ಣ ಸಾಕ್ಷಾತ್ಕಾರಕ್ಕೆ ಅಡೆತಡೆಗಳು ಸೇರಿವೆ.

**ಸಾಮಾಜಿಕ ನ್ಯಾಯ ಉಪಕ್ರಮಗಳಲ್ಲಿ ಭಾರತದ ಪಾತ್ರ**

ವಿಶ್ವ ಸಾಮಾಜಿಕ ನ್ಯಾಯ ದಿನದ ಜಾಗತಿಕ ಧ್ಯೇಯಕ್ಕೆ ಅನುಗುಣವಾಗಿ, ಭಾರತದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಶಾಸಕಾಂಗ ಸುಧಾರಣೆಗಳು, ತಳಮಟ್ಟದ ಉಪಕ್ರಮಗಳು ಮತ್ತು ಅಂತರರಾಷ್ಟ್ರೀಯ ಸಹಯೋಗಗಳ ಮೂಲಕ ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ನಿವಾರಿಸುವ ಕೆಲಸ ಮಾಡುತ್ತಿದೆ. ವರ್ಷಗಳಲ್ಲಿ, ಭಾರತವು ಅಂಚಿನಲ್ಲಿರುವ ಸಮುದಾಯಗಳನ್ನು ಸಬಲೀಕರಣಗೊಳಿಸುವ ಮತ್ತು ಎಲ್ಲಾ ನಾಗರಿಕರಿಗೆ ನ್ಯಾಯವನ್ನು ಎತ್ತಿಹಿಡಿಯುವ ತನ್ನ ಬದ್ಧತೆಯನ್ನು ಬಲಪಡಿಸಿದೆ.

2009 ರಲ್ಲಿ ಆರಂಭವಾದಾಗಿನಿಂದ, ವಿಶ್ವ ಸಾಮಾಜಿಕ ನ್ಯಾಯ ದಿನವು ಸಾಮಾಜಿಕ ನ್ಯಾಯ ಮತ್ತು ಶಾಂತಿಯ ನಡುವಿನ ಪರಸ್ಪರ ಸಂಬಂಧದ ಜಾಗತಿಕ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತಿದೆ. ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳು ಮತ್ತು ಜಾಗತಿಕ ಭದ್ರತೆಯಲ್ಲಿ ಸವಾಲುಗಳೊಂದಿಗೆ, ಸಾಮಾಜಿಕ ನ್ಯಾಯದ ಉಪಕ್ರಮಗಳ

ಪ್ರಾಮುಖ್ಯತೆಯು ಹೆಚ್ಚು ನಿರ್ಣಾಯಕವಾಗುತ್ತಿದೆ. ನ್ಯಾಯಯುತ ಜಾಗತೀಕರಣಕ್ಕಾಗಿ ಸಾಮಾಜಿಕ ನ್ಯಾಯದ ಘೋಷಣೆಯ ಮೂಲಕ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ಐಎಲ್ಒ) ಪ್ರಯತ್ನಗಳಿಂದ ಇದು ಮತ್ತಷ್ಟು ಬೆಂಬಲಿತವಾಗಿದೆ.


**ಭಾರತದಲ್ಲಿನ ಪ್ರಮುಖ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳು**

ಸಾಮಾಜಿಕ ನ್ಯಾಯವನ್ನು ಸಾಧಿಸುವ ಭಾರತದ ಪ್ರಯಾಣವು ಅದರ ಸಾಂವಿಧಾನಿಕ ಆದೇಶಗಳಲ್ಲಿ ಆಳವಾಗಿ ಬೇರೂರಿದೆ, ಇದು ವಿಶೇಷವಾಗಿ ಅನಾನುಕೂಲಕರ ಸಮುದಾಯಗಳಿಗೆ ಸಮಾನತೆ, ಘನತೆ ಮತ್ತು ನ್ಯಾಯವನ್ನು ಖಚಿತಪಡಿಸಿಕೊಳ್ಳಲು ಬಲವಾದ ಅಡಿಪಾಯವನ್ನು ಹಾಕುತ್ತದೆ. ಇತ್ತೀಚಿನ ಉಪಕ್ರಮಗಳಾದ PM-AJAY, NAMASTE, SMILE, PM-DAKSH ಯೋಜನೆ ಮತ್ತು ನಾಶಾ ಮುಕ್ತ ಭಾರತ ಅಭಿಯಾನವು ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಆರ್ಥಿಕ ಸಬಲೀಕರಣದ ಮೂಲಕ ಅಂಚಿನಲ್ಲಿರುವ ಗುಂಪುಗಳಿಗೆ ಅವಕಾಶಗಳನ್ನು ಸೃಷ್ಟಿಸುವತ್ತ ಭಾರತದ ಗಮನವನ್ನು ಎತ್ತಿ ತೋರಿಸುತ್ತದೆ.

ಸಾಮಾಜಿಕ ರಕ್ಷಣಾ ಕ್ರಮಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳ ಸರಣಿಯ ಮೂಲಕ ಪರಿಶಿಷ್ಟ ಜಾತಿಗಳು (Scs), ಇತರ ಹಿಂದುಳಿದ ವರ್ಗಗಳು (OBCs), ಟ್ರಾನ್ಸ್ಜೆಂಡರ್ ವ್ಯಕ್ತಿಗಳು ಮತ್ತು ಭಿಕ್ಷಾಟನೆಯಲ್ಲಿ ತೊಡಗಿರುವ ವ್ಯಕ್ತಿಗಳು ಸೇರಿದಂತೆ ದುರ್ಬಲ ಗುಂಪುಗಳ ಸಬಲೀಕರಣಕ್ಕೆ MoSJE ಆದ್ಯತೆ ನೀಡಿದೆ. ಹೆಚ್ಚುವರಿಯಾಗಿ, ಸರ್ಕಾರವು ತನ್ನ ಬಜೆಟ್ ಹಂಚಿಕೆಯನ್ನು ವಿಸ್ತರಿಸಿದೆ, ಇದು ನ್ಯಾಯ ಮತ್ತು ಸೇರ್ಪಡೆಯನ್ನು ಬೆಳೆಸುವತ್ತ ತನ್ನ ನಿರಂತರ ಗಮನವನ್ನು ಪ್ರತಿಬಿಂಬಿಸುತ್ತದೆ. ಓಂ

ಸುರಕ್ಷಿತ ಅಂತರ್ಜಾಲ ದಿನದ ಮಹತ್ವ

# ಸುರಕ್ಷಿತ ಇಂಟರ್ನೆಟ್ ದಿನ



ಇತ್ತೀಚೆಗಿನ ದಿನಗಳಲ್ಲಿ ಯುವಜನತೆಯಂತೂ ಅಂತರ್ಜಾಲದಲ್ಲಿ ಜಾಲಾಡುವುದನ್ನು ನೋಡಬಹುದು. ಈ ಮಾಯಾಜಾಲದಲ್ಲಿ ಒಮ್ಮೆ ಬಿದ್ದರೆ ಹೊರಬರುವುದು ಕಷ್ಟಕರ. ಆರೋಗ್ಯಕರ ಮತ್ತು ಹೆಚ್ಚು ಸುರಕ್ಷಿತ ಆನ್ಲೈನ್ ಅನುಭವವನ್ನು ಉತ್ತೇಜಿಸುವ ಪ್ರಯತ್ನದಲ್ಲಿ ಸುರಕ್ಷಿತ ಅಂತರ್ಜಾಲ ದಿನವನ್ನು ಮೀಸಲಿಡಲಾಗಿದೆ. ಪ್ರತಿ ವರ್ಷವು ಫೆಬ್ರವರಿ ತಿಂಗಳ ಎರಡನೇ ವಾರದ ಮಂಗಳವಾರದಂದು ಸುರಕ್ಷಿತ ಅಂತರ್ಜಾಲ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ ಫೆಬ್ರವರಿ 11 ರಂದು ಸುರಕ್ಷಿತ ಅಂತರ್ಜಾಲ ದಿನವನ್ನು ಆಚರಿಸಲಾಗುತ್ತಿದೆ.

ಇಂಟರ್ನೆಟ್ ಇಲ್ಲದ ಜಗತ್ತನ್ನು ಊಹೆ ಮಾಡಲು ಕೂಡ ಸಾಧ್ಯವಿಲ್ಲ. ಒಂದು ಕ್ಷಣ ಇಂಟರ್ನೆಟ್ ಸ್ಥಗಿತಗೊಂಡರೆ ಎಲ್ಲಾ ಕೆಲಸಗಳಿಗೂ ಬ್ರೇಕ್ ಬೀಳುತ್ತದೆ. ಹೀಗಾಗಿ ಪ್ರಸ್ತುತ ಜಗತ್ತು ನಡೆಯುತ್ತಿರುವುದೇ ಇಂಟರ್ನೆಟ್ ಮೂಲಕ ಎನ್ನಬಹುದು. ಜಗತ್ತಿನ ಮೂಲೆ ಮೂಲೆಯ ವಿದ್ಯಾಮಾನಗಳಿಂದ ಹಿಡಿದು, ಎಲ್ಲಾ ಸಂಗತಿಗಳು ನಿಮಿಷಾರ್ಧದಲ್ಲಿ ಸಿಗುವುದಕ್ಕೆ ಮೂಲ ಕಾರಣವೇ ಈ ಇಂಟರ್ನೆಟ್. ಆದರೆ ಸ್ಮಾರ್ಟ್ ಫೋನ್ ಎಲ್ಲರ ಕೈಗೆ ಬಂದ ಮೇಲಂತೂ

ಇಂಟರ್ನೆಟ್ ಬಳಕೆ ಹೆಚ್ಚಾಗುತ್ತಿದೆ. ಆದರೆ ಇದನ್ನು ಎಷ್ಟು ಬೇಕೋ ಅಷ್ಟೇ ಬಳಸಿಕೊಂಡರೆ, ಇದರ ಬಳಕೆಯು ಅತಿಯಾದರೆ ಆರೋಗ್ಯಕ್ಕೆ ಮಾತ್ರವಲ್ಲ ಜೀವಕ್ಕೂ ಕುತ್ತಾಗುತ್ತದೆ. ಸ್ವಲ್ಪ ಎಚ್ಚರ ತಪ್ಪಿದರೂ ಖಾಸಗಿ ಮಾಹಿತಿ, ಬ್ಯಾಂಕ್ ಹಣವೆಲ್ಲವು ಸೈಬರ್ ಹ್ಯಾಕರ್ಸ್ ದೋಚುತ್ತಾರೆ. ಆನ್ಲೈನ್ ಸಮಸ್ಯೆಗಳು ಸೇರಿದಂತೆ ಇದರ ಸ್ವಲ್ಪ ಎಚ್ಚರ ತಪ್ಪಿದರೆ ಬಳಕೆದಾರರು ಎದುರಿಸುವ ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಸುರಕ್ಷಿತ ಅಂತರ್ಜಾಲ ದಿನವನ್ನು ಆಚರಿಸಲಾಗುತ್ತದೆ.

## ಸುರಕ್ಷಿತ ಅಂತರ್ಜಾಲ ದಿನದ ಇತಿಹಾಸ

2004 ರಲ್ಲಿ ಇಯು ಸೇಫ್ಬಾರ್ಡರ್ಸ್ ಪ್ರಾಜೆಕ್ಟ್ ಉಪಕ್ರಮವಾಗಿ ಈ ದಿನವನ್ನು ಪ್ರಾರಂಭಿಸಲಾಯಿತು. ಇದನ್ನು ಇನ್ಸೇಫ್ ನೆಟ್ವರ್ಕ್ ತನ್ನ ಆರಂಭಿಕ ಕ್ರಮಗಳಲ್ಲಿ ಒಂದಾಗಿ 2005 ರಲ್ಲಿ ತೆಗೆದುಕೊಂಡಿತು. ಈ ದಿನವನ್ನು ಜಗತ್ತಿನಾದ್ಯಂತ ಸುಮಾರು 180 ಕ್ಕೂ ಅಧಿಕ ದೇಶಗಳು ಮತ್ತು ಪ್ರಾಂತ್ಯಗಳಲ್ಲಿ ಆಚರಿಸಲಾಗುತ್ತಿದೆ. ಈ ದಿನದಂದು ಆನ್ಲೈನ್ ಸಮಸ್ಯೆಗಳು ಸೇರಿದಂತೆ ಇದರ ಅತಿಯಾದ ಬಳಕೆಯಿಂದ ಬಳಕೆದಾರರ ಮೇಲಾಗುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ. ಈ ವರ್ಷ ಫೆಬ್ರವರಿ 11 ರಂದು ಅಂತರ್ಜಾಲ ಸುರಕ್ಷಿತ ದಿನವನ್ನು ಆಚರಿಸಲಾಗುತ್ತಿದೆ.

## ಸುರಕ್ಷಿತ ಅಂತರ್ಜಾಲ ದಿನದ ಮಹತ್ವ

ಪ್ರತಿ ವರ್ಷವು ಫೆಬ್ರವರಿ ತಿಂಗಳ ಎರಡನೇ ವಾರದ ಮಂಗಳವಾರದಂದು ಸುರಕ್ಷಿತ ಅಂತರ್ಜಾಲ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ ಇಂಟರ್ನೆಟ್ ಬಳಕೆಯಿಂದ ಪ್ರಯೋಜನಗಳು ಎಷ್ಟಿದೆಯೋ, ಅಷ್ಟೇ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸ್ವಲ್ಪ ಯಾಮಾರಿದ್ರೂ ಖಾಸಗಿ ಮಾಹಿತಿ, ಬ್ಯಾಂಕ್ ಹಣ, ಅಗತ್ಯ ಮಾಹಿತಿಗಳನ್ನು ಸೈಬರ್ ಹ್ಯಾಕರ್ಸ್ ದೋಚುತ್ತಾರೆ. ಹೀಗಾಗಿ ಆನ್ಲೈನ್ ಸಮಸ್ಯೆಗಳು ಸೇರಿದಂತೆ ಇದರ ಸ್ವಲ್ಪ ಎಚ್ಚರ ತಪ್ಪಿದರೆ ಬಳಕೆದಾರರು ಎದುರಿಸುವ ತೊಂದರೆಗಳ ಬಗ್ಗೆ ವಿಶೇಷವಾಗಿ ಮಕ್ಕಳು ಮತ್ತು ಯುವಜನರಿಗೆ ಜಾಗೃತಿ ಮೂಡಿಸುವ ಸಲುವಾಗಿ ಈ ದಿನವು ಮಹತ್ವದ್ದಾಗಿದೆ. ಈ ಹಿನ್ನಲೆಯಲ್ಲಿ ಸುರಕ್ಷಿತ ಅಂತರ್ಜಾಲ ದಿನದ ಪ್ರಯುಕ್ತ ಶಾಲಾ ಕಾಲೇಜುಗಳಲ್ಲಿ ಸೆಮಿನಾರ್, ಜಾಗೃತಿ ಅಭಿಯಾನಗಳು ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

## ಸುರಕ್ಷಿತ ಆನ್ಲೈನ್ ವ್ಯವಹಾರದ ಮಾಹಿತಿ

1 ನಿಮ್ಮ ಮನೆಯ ಕಂಪ್ಯೂಟರ್ ಅಥವಾ ಲ್ಯಾಪ್ ಟಾಪ್ ಗಳನ್ನೇ ಬಳಸಿ. ಆಗಾಗ ಸರ್ವಿಸ್ ಮಾಡಿಸುವ ಮೂಲಕ ಸದಾ ಅಪ್ಡೇಟ್ ಆಗಿರಿಸಿಕೊಳ್ಳಿ.

2 ಯಾವುದೇ ಕಾರಣಕ್ಕೂ ಸೈಬರ್ ಕೆಫೆಯಲ್ಲಿ ಆನ್ಲೈನ್ ವ್ಯವಹಾರ ಹಾಗೂ ವಹಿವಾಟನ್ನು ನಡೆಸಲೇಬೇಡಿ.

3 ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾಗಬಹುದೇನ್ನುವ ಕಾರಣಕ್ಕೆ ನಿಮ್ಮ ಪಾಸ್ ವರ್ಡ್ ಗಳಲ್ಲಿ ಹುಟ್ಟಿದ ದಿನಾಂಕ, ಆತ್ಮೀಯ ವ್ಯಕ್ತಿಗಳ ಹೆಸರು, ಮೊಬೈಲ್ ಸಂಖ್ಯೆಗಳನ್ನು ಬಳಸಬೇಡಿ. ಈ ಪಾಸ್ ವರ್ಡ್ ಗಳು ಸುಲಭವಾಗಿ ಹ್ಯಾಕರ್ಸ್ ಗಳ ಕೈ ಸೇರಬಹುದು.

4 ಪಾನ್ ಕಾರ್ಡ್ ನಂಬರ್, ಆಧಾರ್ ಕಾರ್ಡ್ ನಂಬರ್ ಹಾಗೂ ಬ್ಯಾಂಕ್ ಮಾಹಿತಿಗಳನ್ನು ಕೇಳುವ ಇ–ಮೇಲ್ ಗೆ ಯಾವುದೇ ಕಾರಣಕ್ಕೂ ಪ್ರತಿಕ್ರಿಯಿಸಬೇಡಿ.


5 ನಿಮ್ಮ ಮೇಲ್ ಅಥವಾ ವಾಟ್ಸಪ್ಪ್ ಗೆ ಬರುವ ಯಾವುದೇ ಅನಗತ್ಯ ಲಿಂಕ್ ಮೇಲೆ ಕ್ಲಿಕ್ ಮಾಡಬೇಡಿ.

6 ನಿಮ್ಮ ಪಾಸ್ ವರ್ಡ್ ಗಳನ್ನು ಎಷ್ಟೇ ಆತ್ಮೀಯರಿದ್ದರೂ ಸರಿಯೇ, ಅಪ್ಪಿ ತಪ್ಪಿಯೂ ಯಾರೊಂದಿಗೂ ಹಂಚಿಕೊಳ್ಳದಿರಿ.

**ಸಮೃದ್ಧಿ ಸುಜ್ಞಾನ**
'ಜಗತ್ತಿನಲ್ಲಿ ಅತ್ಯಂತ ಕಠಿಣ ಕೆಲಸವೆಂದರೆ ನಮ್ಮವರಲ್ಲಿ ಸ್ವಂತ ನಮ್ಮವರನ್ನು ಹುಡುಕುವುದು'

ಆಧುನಿಕ ಕನ್ನಡ ಅಧ್ಯಯನದ ತೋರುದಾರಿ, ವಿಮರ್ಶಕರ ಗುರು ಹಾಗೂ ಸಜ್ಜನಿಕೆಯ ಮಾದರಿ

# ಜಿ. ಎಸ್. ಶಿವರುದ್ರಪ್ಪ



ಫೆಬ್ರವರಿ 7, 1926ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಹುಟ್ಟಿದ ಜಿ. ಎಸ್. ಶಿವರುದ್ರಪ್ಪ ಈ ನಾಡಿನಲ್ಲಿ ವ್ಯಾಪಕವಾಗಿ ಸಂಚರಿಸಿದ್ದವರು. ಪ್ರವಾಸ ಪ್ರೀತಿಯ ಜೀಯೆಸ್ಸೆಸ್ ಈ ಸುತ್ತುವಿಕೆಯಿಂದ ಬಹುಶ್ರುತತೆಯನ್ನು, ಸಮಚಿತ್ತವನ್ನು, ಜನಸಂಪರ್ಕವನ್ನು ಪಡೆದಿದ್ದರು.

ಸೃಜನ, ವಿಮರ್ಶೆ, ಮೀಮಾಂಸೆ, ಅಧ್ಯಯನ, ಅಧ್ಯಾಪನ, ಆಡಳಿತ, ಸಂಘಟನೆ – ಈ ಮುಂತಾದ ಸಾಂಸ್ಕೃತಿಕ ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕನ್ನಡ ಸಂಸ್ಕೃತಿಯ ಚಲನಶೀಲತೆಗೆ ತಮ್ಮ ಕೊಡುಗೆ ನೀಡುತ್ತ ಬಂದ ಮುಖ್ಯರಲ್ಲಿ ಜೀಯೆಸ್ಸೆಸ್ ಒಬ್ಬರಾಗಿದ್ದಾರೆ. ಡಾ. ಜಿ. ಎಸ್. ಶಿವರುದ್ರಪ್ಪನವರು ಗೋವಿಂದಪೈ, ಕುವೆಂಪು ನಂತರ ಮೂರನೆಯ ರಾಷ್ಟ್ರಕವಿಯಾಗಿ ನಮ್ಮ ಕನ್ನಡಿಗರ ಹೆಮ್ಮೆಯಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾಗಿ, ದೂರ ದೂರದ ಹಳ್ಳಿಗಾಡುಗಳಲ್ಲಿ ಓದಿನ ಸೌಲಭ್ಯಗಳಿಗಾಗಿ ನಿಧಾನವಾಗಿ ತೆರೆದುಕೊಳ್ಳುತ್ತಿದ್ದ ಜನಸಮುದಾಯದಿಂದ ಬಂದು ಶ್ರಮ, ನಿಷ್ಠೆ, ಹಾಗೂ ಪ್ರತಿಭೆಗಳಿಂದ ರಂಗದಲ್ಲಿ ಮುಖ್ಯರಾಗತೊಡಗಿದ್ದ, ಹಾಗೆ ತೊಡಗಿ ಯಶಸ್ಸು ಪಡೆದ ಮೊದಲ ತಲೆಮಾರಿಗೆ ಜೀಯೆಸ್ಸೆಸ್ ಸೇರುತ್ತಾರೆ. ಕನ್ನಡ ನವೋದಯದ ಮುಂದಾಳುಗಳು ರೂಪಿಸಿದ ಹಾದಿಯಲ್ಲಿ ನಡೆದು ಸಮರ್ಥ ಉತ್ತರಾಧಿಕಾರಿಗಳೆಂದು ಎಂದು ಸಾಬೀತು ಮಾಡಿದರು. ಶಿಕ್ಷಕ ತಂದೆಯೊಡನೆ ಸುತ್ತುತ್ತ ಊರೂರುಗಳಲ್ಲಿ ಶಿಕ್ಷಣ ಪಡೆದು ಮೈಸೂರು ಸೇರಿ ವೆಂಕಣ್ಣಯ್ಯ, ಕುವೆಂಪು ಅವರ ಒತ್ತಾಸೆಯಲ್ಲಿ ಬಿ.ಎ (ಆನರ್ಸ್), ಎಂ.ಎ ಹಾಗೂ ಪಿಎಚ್.ಡಿ ಗಳನ್ನು ಪಡೆದರು. ಮಹಾರಾಜ ಕಾಲೇಜು ಆಗ ಟಂಕಸಾಲೆ. ಅಲ್ಲಿ ಪ್ರಮಾಣೀಕರಣಗೊಂಡರೆ ಮಾತ್ರ ಸಾಹಿತ್ಯ ವ್ಯಕ್ತಿತ್ವಕ್ಕೆ ಚಲಾವಣೆ ಸಿಗುವಂತೆ ಇದ್ದ ಕಾಲ. ವಿಶ್ವವಿದ್ಯಾಲಯದ ಹೊರಗಿದ್ದವರೂ ಒಂದಲ್ಲ ಒಂದು ಬಗೆಯಲ್ಲಿ ಈ ಟಂಕಸಾಲೆಯ ವ್ಯಾಪ್ತಿಯ ಒಳಗಾಗಿಯೇ ಇದ್ದರೆಂಬುದಕ್ಕೆ ಪ್ರಬುದ್ಧ ಕರ್ನಾಟಕ ಹಾಗೂ ಮಹಾರಾಜ ಕಾಲೇಜು ಕರ್ನಾಟಕ ಸಂಘ ಪ್ರಕಟಿಸಿದ ಗ್ರಂಥಗಳ ಪುಟಗಳು ಸಾಕ್ಷಿಯಾಗಿವೆ. ಜೀಯೆಸ್ಸೆಸ್ ಅಲ್ಲಿ ಕವಿಯಾಗುವ ಹಂಬಲಕ್ಕೆ ಪುಷ್ಟಿ ಪಡೆದರು. ಮಾಸ್ತಿಯವರು 'ಜೀವನ'ದಲ್ಲಿ ಈ ಕವಿಯನ್ನು ಮೊದಲು ಅನಾವರಣಗೊಳಿಸಿದರಾದರೂ ಜೀಯೆಸ್ಸೆಸ್ ಹಸಿರು ಬಾವುಟ ಕಂಡದ್ದು ಕುವೆಂಪು ಅವರಲ್ಲಿ. ಈ ಮಹಾರಾಜ ಕಾಲೇಜು ಇವರೊಳಗಿನ ವಿಮರ್ಶಕ ಮೀಮಾಂಸಕರನ್ನೂ ಬೆಳೆಸಿತು.

ಜೀಯೆಸ್ಸೆಸ್ ಮೈಸೂರು ವಿಶ್ವವಿದ್ಯಾಲಯದ ವಿವಿಧ ಕಾಲೇಜುಗಳಲ್ಲಿ (ದಾವಣಗೆರೆ, ಶಿವಮೊಗ್ಗೆ, ಮೈಸೂರು) ಅಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡಿ, ಮರಳಿ ಮಹಾರಾಜಾ ಕಾಲೇಜಿಗೆ ಬಂದು, ಅನಂತರ (1966) ಬೆಂಗಳೂರು ವಿಶ್ವವಿದ್ಯಾಲಯ ಸೇರಿ, 1970ರಿಂದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾದರು. ಇಲ್ಲಿ ಎರಡು ದಶಕಗಳ ಕಾಲ ಕಾವ್ಯ, ಕಾವ್ಯಮೀಮಾಂಸೆಗಳ ಪಾಠ ಹೇಳಿದರು. ಕನ್ನಡದ ಅತಿ ಪ್ರಭಾವಶಾಲಿ ಅಧ್ಯಾಪಕರ ಪರಂಪರೆಗೆ ಜೀಯೆಸ್ಸೆಸ್ ಸೇರಿದವರು. ಪ್ರಾಚೀನ ಹಾಗೂ ಆಧುನಿಕ ಕನ್ನಡ ಕಾವ್ಯ, ಇಂಗ್ಲಿಷ್ ರೋಮಾಂಟಿಕ್ ಕಾವ್ಯ, ಐರೋಪ್ಯ ನವ್ಯಕಾವ್ಯ, ಪಾಶ್ಚಾತ್ಯ ಮಹಾಕಾವ್ಯ ಹಾಗೂ ತೌಲನಿಕ ಕಾವ್ಯ ಮೀಮಾಂಸೆ – ಇವು ಅವರು ಪಾಠ ಹೇಳಿದ ಮುಖ್ಯ ವಲಯಗಳು. ಎಲ್ಲ ಕಾಲದ, ಎಲ್ಲ ದೇಶದ ಕವಿಗಳನ್ನು ಕನ್ನಡದ ಸಂವೇದನೆಯ ಮೂಲಕವೇ ಗ್ರಹಿಸಬಯಸುವ, ಪರೋಕ್ಷವಾಗಿ ಒಂದು ಬಗೆಯ ಶುದ್ಧ ಕಾವ್ಯವನ್ನು ಹುಡುಕುವ ವಿಧಾನವನ್ನು ಬಳಸಿದರು. ಅವರ ಪಾಠಗಳು ಪೂರ್ವಸಿದ್ಧತೆ, ವಿವರಗಳ ಮಂಡನೆ, ಚಿಂತನಶೀಲತೆ, ಸಾಮಾಜಿಕ ಒಳನೋಟಗಳನ್ನು ಒಳಗೊಂಡಿರುವುದರ ಜೊತೆಗೆ ಹೊಸದನ್ನು ಅಳವಡಿಸಿಕೊಳ್ಳುವ, ಹೊಸದಾದುದಕ್ಕೆ ಪ್ರತಿಕ್ರಿಯಿಸುವ ಆಸಕ್ತಿಯಿಂದ

ಕೂಡಿರುತ್ತಿದ್ದವು. ಅವರ ಪಾಠಗಳು ಅವರ ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚಿ ಮೊಳೆತು ಬೆಳೆದಿವೆಯಾಗಿ, ಜೀಯೆಸ್ಸೆಸ್ ಪರೋಕ್ಷವಾಗಿ ತರಗತಿಯ ಹೊರಗೂ ಮೇಷ್ಟ್ರಾಗಿದ್ದರು. ಅವರ ಹಲವಾರು ಶಿಷ್ಯರು ಕನ್ನಡ ವಿಮರ್ಶೆ ಮತ್ತು ಸಾಹಿತ್ಯಾಧ್ಯಯನದ ಕ್ಷೇತ್ರದ ಕೃಷಿಯಲ್ಲಿ ತೊಡಗಿ ಅಪಾರ ಸಾಧನೆ ಮಾಡಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕರಾಗಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸಾಹಿತ್ಯ ಸಂಬಂಧದ ಚಟುವಟಿಕೆಗಳನ್ನು ಸಂಯೋಜಿಸಿ, ಸಂಘಟಿಸಿ, ನಿರ್ವಹಿಸಿ ಜೀಯೆಸ್ಸೆಸ್ ಹೆಸರಾಗಿದ್ದರು. ಕನ್ನಡ ವಿಮರ್ಶೆಯ ಬೆಳವಣಿಗೆಗೆ ಅವರು ಹಾಕಿಕೊಂಡ ಹಲವು ಯೋಜನೆಗಳನ್ನು ಕಾರ್ಯಗತ ಮಾಡಿದರು. 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಸಂಪುಟಗಳು ಮತ್ತು 'ಸಾಹಿತ್ಯ ವಾರ್ಷಿಕ'ದ ಯೋಜನೆಗಳು ಅನನ್ಯವಾದವು. ಸಾಂಸ್ಥಿಕ ಪ್ರಯತ್ನದ ಸಾಹಿತ್ಯ ಚರಿತ್ರೆಯ ಯೋಜನೆಯಲ್ಲಿ ವಿವಿಧ ಚಿಂತನಾಕ್ರಮಗಳ ಮೇಳವನ್ನು 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯು ಸಾಧಿಸಿದರೆ, 'ಸಾಹಿತ್ಯ ವಾರ್ಷಿಕ' ದಾಖಲೆಯ ಜೊತೆಗೆ ವಿಮರ್ಶೆಯ ಬೆಳವಣಿಗೆಯ ದಿಕ್ಕನ್ನು ಕೂಡ ಸಾಧಿಸಲು ಸಮರ್ಥವಾಯಿತು. ಇಂಥ ಪ್ರಯತ್ನಗಳನ್ನು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಜೀಯೆಸ್ಸೆಸ್ ಮುಂದುವರೆಸಿ ಯಶಸ್ಸು ಸಾಧಿಸಿದ್ದರು.

ಜೀಯೆಸ್ಸೆಸ್ ಅವರು ಕನ್ನಡ ಸಾಹಿತ್ಯ ಪಂಡಿತರಿಗೆ, ಸಾಹಿತ್ಯ ಚಿಂತಕರಿಗೆ, ಸಾಹಿತ್ಯ ಪ್ರಿಯರಿಗೆ ಎಷ್ಟು ಪ್ರಿಯರೋ, ಜನಸಾಮಾನ್ಯರಿಗೆ ಕೂಡ ಬಲುಪ್ರಿಯರು. ಅವರ ಭಾವಗೀತೆಗಳು ಹಲವಾರು ಪ್ರಮುಖ ಹಾಡುಗಾರರ, ಜನಸಾಮಾನ್ಯರ ಧ್ವನಿಗಳಲ್ಲಿ ಹಲವಾರು ದಶಕಗಳಿಂದ ನಲಿಯುತ್ತ ಸಾಗಿದೆ. 'ಎದೆ ತುಂಬಿ ಹಾಡಿದೆನು ಅಂದು ನಾನು' ಹಾಡನ್ನು ಅನುಭವಿಸದ ಕನ್ನಡಿಗನೇ ಇಲ್ಲ. ಎಲ್ಲ ಮಾದರಿಯ ಕವಿತೆಗಳಲ್ಲಿ, ಹಾಡುಗಳಲ್ಲಿ ಅದು ನಿರಂತರವಾಗಿ ಜನರ ನಾಲಿಗೆಯಲ್ಲಿ, ಜನಮಾನಸದಲ್ಲಿ ಬೆಳಗುತ್ತಿದೆ. 'ಉಡುಗಣವೇಷ್ಟಿತ ಚಂದ್ರ ಸುಶೋಭಿತ ನೀಲಾಂಬರ ಸಂಚಾರಿ', 'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ', 'ಕಾಣದ ಕಡಲಿಗೆ ಹಂಬಲಿಸಿದೆ ಮನ', 'ಯಾರವರು ಯಾರವರು ಯಾರವರು ಯಾರೋ', 'ಆಕಾಶದ ನೀಲಿಯಲ್ಲಿ ಚಂದ್ರತಾರೆ ತೊಟ್ಟಿಲಲ್ಲಿ', 'ವೇದಾಂತಿ ಹೇಳಿದನು ಹೊನ್ನೆಲ್ಲ ಮಣ್ಣು ಮಣ್ಣು', 'ಹಾಡು ಹಳೆಯದಾದರೇನು', 'ಯಾವುದೀ ಪ್ರವಾಹವೂ', 'ಬೆಳಗು ಬಾ ಹಣತೆಯನು', 'ನೀನು ಮುಗಿಲು ನಾನು ನೆಲ' ಹೀಗೆ ಅವರ ಭಾವಗೀತೆಗಳನ್ನು ಒಂದಾದ ಮೇಲೆ ಒಂದು ನೆನಪಿಸಿಕೊಳ್ಳುತ್ತಲೇ ಇರಬೇಕು ಎಂದೆನಿಸುತ್ತದೆ ಮಾತ್ರವಲ್ಲ ಆ ನೆನಪೇ ಒಂದು ಸವಿ ಪಯಣದ ಮೆಲುಕಿನಂತಿರುತ್ತದೆ. ಜೀಯೆಸ್ಸೆಸ್ ಕನ್ನಡಪರ ಚಳುವಳಿಗಳಲ್ಲಿ, ಕಾಳಜಿಗಳಲ್ಲಿ ಕೂಡಾ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದವರು.

ಕನ್ನಡದ ಮುಖ್ಯಕವಿಗಳಾಗಿ ಜೀಯೆಸ್ಸೆಸ್ ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಕಾವ್ಯರಚನೆ ಮಾಡಿದರು. ಕುವೆಂಪು ಮತ್ತು ಪು.ತಿ.ನ ಅವರ ಕಾವ್ಯರಚನೆಗಳಿಂದ ಬೇರೆ ಬೇರೆ ಬಗೆಯಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಪ್ರಭಾವಿತರಾಗಿ ಕವಿತೆಗಳನ್ನು ಬರೆಯತೊಡಗಿದ ಜೀಯೆಸ್ಸೆಸ್ ಮುಂದಿನ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಬೆರೆಯುತ್ತ ಬೆಳೆದರು. ನವೋದಯ, ನವ್ಯ, ಬಂಡಾಯಗಳೆಂಬ ಮಾರ್ಗಗಳು ಅವರ ಕಾವ್ಯರಚನೆಯನ್ನು ಪ್ರಭಾವಿಸಿದ್ದವು. ಇವುಗಳ ಪ್ರಭಾವ ಏನೇ ಇದ್ದರೂ, ಜೀಯೆಸ್ಸೆಸ್ ಅವರ ಮುಖ್ಯ ಕವಿತೆಗಳಲ್ಲಿ ತುಂಬಿರುವುದು ಪ್ರಸಾದ ಗುಣ. ಇವರ ಕವನ ಸಮುದಾಯದ ಕವಿತೆಗಳ ಸಾಧಾರಣ ಧರ್ಮವನ್ನು ಗಮನಿಸಿದರೆ ಕವಿ, ಕಾವ್ಯಶರೀರವನ್ನು, ಪದಸಂಯೋಜನೆಯನ್ನು, ಅರ್ಥವು ಓದುಗನಿಗೆ ಸಂವಹನಗೊಳಿಸುವ ಪಾರದರ್ಶಕ ಮಾಧ್ಯಮವನ್ನಾಗಿ ಬಳಸಿರುವುದು ಸ್ಪಷ್ಟಗೊಳ್ಳುತ್ತದೆ. ಕಾವ್ಯಶರೀರ 'ಅರ್ಥ'ವನ್ನು ಮುಚ್ಚಿಡಲು ರೂಪುಗೊಂಡುದಲ್ಲ. ಹಾಗೆಯೇ 'ಅರ್ಥ'ವನ್ನು ಗ್ರಹಿಸಿಕೊಳ್ಳಲೆಂದೇ ಕಾವ್ಯ ಶರೀರವನ್ನು ರೂಪಿಸುವ ನವ್ಯಕವಿಗಳ ಮಾದರಿಯೂ ಇವರದ್ದಲ್ಲ. ಕವಿ ತನ್ನ ಅನುಭವಕ್ಕೆ ದಕ್ಕಿದ ಭಾವಾರ್ಥಗಳನ್ನು ಭಾಷಿಕವಾಗಿ ಮಂಡಿಸುತ್ತಾರೆ, ಹೀಗಾಗಿ ಇದೊಂದು ಬಗೆಯ ಧ್ಯಾನಿತ ಕಾವ್ಯ. ಹಾಗಾಗಿ ಕವಿ ಅನುಭವದ ಗ್ರಹಿಕೆಗೆ ಕಾವ್ಯ ಬಿಡುಗಡೆಯ ಮಾಧ್ಯಮವಾಗುತ್ತದೆ.

'ಸಾಮಗಾನ', 'ಚೆಲುವು–ಒಲವು', 'ದೇವಶಿಲ್ಪ', 'ದೀಪದ ಹೆಜ್ಜೆ', 'ಅನಾವರಣ', 'ತೆರೆದ ಬಾಗಿಲು', 'ಗೋಡೆ', 'ವ್ಯಕ್ತಮಧ್ಯ', 'ತೀರ್ಥವಾಣಿ', 'ಕಾರ್ತಿಕ', 'ಕಾಡಿನ ಕತ್ತಲಲ್ಲಿ', 'ಪ್ರೀತಿ ಇಲ್ಲದ ಮೇಲೆ', 'ಚಕ್ರಗತಿ' ಅವರ ಪ್ರಮುಖ ಕವನ

ಸಂಕಲನಗಳು. ಜೀಯೆಸ್ಸೆಸ್ ತಮ್ಮ ಕವಿತೆಗಳಲ್ಲಿ ಎರಡು ಜಗತ್ತುಗಳಿಗೆ ಸ್ಪಂದಿಸುವ ಹೊಣೆ ಹೊರಲು ಸಿದ್ಧರಾಗಿದ್ದದ್ದು ಕಂಡುಬರುತ್ತದೆ. ಒಂದು ಜೀವಸಮೃದ್ಧ ಪ್ರಕೃತಿ, ಇನ್ನೊಂದು ಮಾನವ ಕೇಂದ್ರಿತ ಸಮಾಜ. ವಿಸ್ಮಯ ಉತ್ಸುಕತೆಗಳು ಅವರ ಕವಿತೆಗಳ ಪ್ರಧಾನ ಭಾವಗಳಾಗಿದ್ದವು. ಪ್ರಕೃತಿಯ ನಿಯತ ಲಯಗಳು ಕವಿಗೆ ಸದಾ ಆಕರ್ಷಣೆಯನ್ನು ಉಂಟುಮಾಡಿದ್ದವು. ಇನ್ನೊಂದು ನೆಲೆಯಲ್ಲಿ ಅವರಲ್ಲಿದ್ದ ನಿರೂಪಕ ಸಾಮಾಜಿಕ ಹೊಣೆಗಾರಿಕೆಯನ್ನು ಪಡೆದುಕೊಂಡಿದ್ದ. ಆವರಣದ ಮಾನವ ಜಗತ್ತಿನ ವೈಸಾದೃಶ್ಯಗಳನ್ನು, ಲಯರಾಹಿತ್ಯವನ್ನು, ಅಪಶ್ರುತಿಗಳನ್ನು ಗ್ರಹಿಸಿ ಅವುಗಳನ್ನು ತನ್ನ ಕವಿತೆಗಳಲ್ಲಿ ಮಂಡಿಸುವುದು ಈ ನಿರೂಪಕನ ವೈಶಿಷ್ಟ್ಯ.

'ಕಾಲ' ಮತ್ತು 'ಮನುಷ್ಯ ತಮ್ಮ ಕಾವ್ಯದ ಕೇಂದ್ರಗಳು ಎಂದು ಜೀಯೆಸ್ಸೆಸ್ ಹೇಳಿರುವುದುಂಟು. ನಿರಂತರವಾದದ್ದು ಹಾಗೂ ಅದರ ಒಂದು ಘಟಕದಲ್ಲಿ ನಿಜವಾಗವಂಥದ್ದು ಇವೆರಡೂ, ಅತೀತವಾದದ್ದು ಅನ್ಯವಲ್ಲ, ಅದು ಲೋಕವೇ ಎಂಬ ನೆಲೆಯಲ್ಲಿರುವ ಇವರ ಕಾವ್ಯ ಲೋಕಪ್ರೀತಿಯದು. 'ಪರಿಶೀಲನದಿಂದ' ಮೊದಲಾಗಿ 'ಗತಿಬಿಂಬ', 'ನವೋದಯ', 'ಅನುರಣನ', 'ಪ್ರತಿಕ್ರಿಯೆ', ಮತ್ತು 'ಬೆಡಗು' ವರೆಗಿನ ಅವರ ವಿಮರ್ಶೆಯ ಸಂಕಲನಗಳು ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಾಹಿತ್ಯ ಕೃತಿಗಳ ಬಗೆಗೆ ಸಮರ್ಥ ಒಳನೋಟಗಳನ್ನು ನೀಡುತ್ತವೆ. ಕನ್ನಡ ನವೋದಯ ವಿಮರ್ಶೆಯ ವಿಚಾರಮೂಲವಾದಿ ಆಕೃತಿಗಳನ್ನು ಇಡಿಯಾಗಿ ಕನ್ನಡ ಸಾಹಿತ್ಯ ಪರಂಪರೆ ಮತ್ತು ಸಮಕಾಲೀನ ಕಾವ್ಯಕ್ಕೆ ಸಮರ್ಥವಾಗಿ ಅನ್ವಯಿಸುವ ಜೀಯೆಸ್ಸೆಸ್ ಅವರ 'ಸೌಂದರ್ಯ ಸಮೀಕ್ಷೆ' ಮಹಾಪ್ರಬಂಧ ಅವರ ವಿಮರ್ಶಾ ಪ್ರಯತ್ನದ ಪ್ರಮುಖ ಹಂತ. ಅವರ 'ಸೌಂದರ್ಯ ಸಮೀಕ್ಷೆ'ಯಲ್ಲಿ ಕಾವ್ಯಗಳಲ್ಲಿ, ಕೃತಿಭಾಗಗಳಲ್ಲಿ ಕಂಡು ಬರುವ 'ಲೋಕಾನುಭವ ಪರಿವರ್ತನೆ'ಯನ್ನು ವ್ಯಾಖ್ಯಾನಿಸುವ ಬಗೆ ಸಾಹಿತ್ಯಾಭ್ಯಾಸಿಗಳಿಗೆ ಈಗಲೂ ಸಾಹಿತ್ಯಾಧ್ಯಯನಕ್ಕೆ ಪ್ರವೇಶವನ್ನು, ಸಾಹಿತ್ಯಾಭಿರುಚಿಗೆ ಮಾದರಿಯನ್ನು ಒದಗಿಸಬಲ್ಲದು. ತಾತ್ವಿಕವಾಗಿ ಕನ್ನಡ ಕಾವ್ಯಪರಂಪರೆಯನ್ನು ವ್ಯಾಖ್ಯಾನಿಸುವ ಅವರ ಇನ್ನೆರಡು ಪ್ರಯತ್ನಗಳೆಂದರೆ 'ಕನ್ನಡ ಸಾಹಿತ್ಯ ಸಮೀಕ್ಷೆ' ಮತ್ತು 'ಕನ್ನಡ ಕವಿಗಳ ಕಾವ್ಯ ಕಲ್ಪನೆ'. ಕನ್ನಡ ಸಾಹಿತ್ಯ ಮೀಮಾಂಸೆಯ ಚೌಕಟ್ಟನ್ನು ರಚಿಸಲು ಬೇಕಾದ ಮೂಲಭೂತ ಅಂಶಗಳು ಈ ಕೃತಿಗಳಲ್ಲಿ ಚರ್ಚಿತವಾಗಿವೆ.

'ಮಹಾಕಾವ್ಯ ಸಮೀಕ್ಷೆ' ಗ್ರಂಥದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಮಹಾಕಾವ್ಯ ಸಂಬಂಧ ತತ್ವಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಇಂಥ ಹೋಲಿಕೆಯ ಅಧ್ಯಯನವನ್ನು ಸಾಹಿತ್ಯ ತತ್ವಗಳ, ತಾತ್ವಿಕ ಪರಿಕಲ್ಪನೆಗಳ ನೆಲೆಯಲ್ಲಿ ಬಳಸಿ ಬರೆದ ಲೇಖನಗಳ ಸಂಕಲನ, 'ಕಾವ್ಯಾರ್ಥ ಚಿಂತನ'. ಜೀಯೆಸ್ಸೆಸ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರವನ್ನು ತಂದು ಕೊಟ್ಟ ಕೃತಿ ಇದು.

ಇಷ್ಟೆಲ್ಲಾ ಬರಹಗಳ ನಡುವೆ ಜೀಯೆಸ್ಸೆಸ್ ಮೂರು ಪ್ರವಾಸ ಕಥನಗಳನ್ನು (ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಗಂಗೆಯ ಶಿಖರಗಳಲ್ಲಿ ಮತ್ತು ಅಮೆರಿಕದಲ್ಲಿ ಕನ್ನಡಿಗ), ಒಂದು ಜೀವನಚಿತ್ರವನ್ನು (ಕರ್ಮಯೋಗಿ) ಹಾಗೂ ಆತ್ಮಕಥನ ಭಾಗವನ್ನು (ಚತುರಂಗ) ಬರೆದಿದ್ದರು. ಪ್ರವಾಸಕಥನಗಳು ಸಮೃದ್ಧ ವಿವರಗಳ ಜೊತೆಗೆ ಸಂವೇದನಾಶೀಲವಾದ ಮನಸ್ಸಿನ ತುಡಿತಗಳನ್ನು ಒಳಗೊಂಡಿವೆ.

'ಕರ್ಮಯೋಗಿ' ಸಿದ್ಧರಾಮನನ್ನು ಕುರಿತು ಬರೆದ ಜೀವನಚಿತ್ರ. ಕನ್ನಡ ಕಾವ್ಯಗಳನ್ನು, ಅವುಗಳ ಕಥನವನ್ನು ಆಧುನಿಕ ನುಡಿಕಟ್ಟಿನಲ್ಲಿ ಹೇಳುವ ಪ್ರಯತ್ನಗಳಲ್ಲಿ ಇದು ಒಂದು. 'ಚತುರಂಗ'ದಲ್ಲಿ ತಮ್ಮ ಜೀವನದ ಬೇರೆಬೇರೆ ಹಂತಗಳನ್ನು, ನೆಲೆಗಳನ್ನು ಗಮನಿಸಿ ಮುಖ್ಯವಾದ ವಿವರಗಳನ್ನು ಬಳಸಿ ಒಂದು ಆತ್ಮಕಥಾನಕವನ್ನು ಬರೆದಿದ್ದಾರೆ.

ಕಳೆದ ಶತಮಾನದ ಸಾಹಿತ್ಯ ಚರಿತ್ರೆ ಬರೆಯುವವರು ಗಮನಿಸಲೇಬೇಕಾದ ಬಹುಮುಖ್ಯ ಕೃತಿಗಳನ್ನು ಜೀಯೆಸ್ಸೆಸ್ ಬರೆದಿದ್ದಾರೆ. ಮಾತ್ರವಲ್ಲ ಸಾಹಿತ್ಯದ ಬೆಳವಣಿಗೆಯ ಹಲವು ನೆಲೆಗಳಲ್ಲಿ ಪರೋಕ್ಷವಾಗಿ ತಮ್ಮ ಸಾಹಿತ್ಯಕ ವ್ಯಕ್ತಿತ್ವದಿಂದ ಪ್ರೇರಣೆಯನ್ನು ಒದಗಿಸಿದ್ದಾರೆ.

ಈ ಮಹಾನ್ ಸಾಹಿತ್ಯಾಚಾರ್ಯರು ಡಿಸೆಂಬರ್ 23, 2013ರಂದು ಈ ಲೋಕವನ್ನಗಲಿದರು.

# ಪರಶಿವ ತಪಗೈದ ಸ್ಥಳ ಜ್ವಾಲಾಪೀಠ



ಡಾ. ಡಿ.ಸಿ.ರಾಮಚಂದ್ರ
ಶ್ರೀಕ್ಷೇತ್ರ ಆದಿಚುಂಚನಗಿರಿ

ಪ್ರಸಿದ್ಧ ಪುಣ್ಯಕ್ಷೇತ್ರವೂ, ಪ್ರಾಚೀನವೂ ಆದ ಮಹಾನ್ ಧರ್ಮಕ್ಷೇತ್ರ ಶ್ರೀಆದಿಚುಂಚನಗಿರಿ, ಸುಮಾರು 1800 ವರ್ಷಗಳಿಗೂ ಹೆಚ್ಚು ಪುರಾಣೇತಿಹಾಸವುಳ್ಳ ಶ್ರೀಕ್ಷೇತ್ರವೂ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ, ನಾಗಮಂಗಲ ತಾಲ್ಲೂಕಿನ, ಬೆಳ್ಳೂರಿನಿಂದ ಸುಮಾರು 6 ಕಿ.ಮೀ ದೂರದಲ್ಲಿದೆ. ರಮಣೀಯವೂ, ಪ್ರಶಾಂತವೂ ಹಸಿರು ವನಸಿರಿಯಿಂದ ಕಂಗೊಳಿಸುತ್ತಿರುವ ಶ್ರೀಕ್ಷೇತ್ರವು ಪರಶಿವನ ತಪ್ಪೋಭೂಮಿಯಾಗಿತು ಎಂದು ಜನಪದ ಮತ್ತು ಪುರಾಣದಿಂದ ತಿಳಿದು ಬರುತ್ತದೆ.

ಪುರಾಣದಲ್ಲಿ ತಿಳಿದಂತೆ ಶ್ರೀಪೀಠವೂ ಸ್ಥಾಪನೆಯಾದದ್ದು ತ್ರೇತಾಯುಗದಲ್ಲಿ ಪರಮೇಶ್ವರನೇ ಈ ಪೀಠದ ಸ್ಥಾಪಕ ಎಂದು ನಂಬಲಾಗಿದೆ.

ಶ್ರೀ ಜ್ವಾಲಾಪೀಠವು ಶಿವನು ತಪಸ್ಸಿಗೆ ಕುಳಿತ ಪವಿತ್ರವಾದ ಸ್ಥಳ. ಶಿವನ ತೇಜಸ್ಸಿನ ಅಂಶದಿಂದ ಕೂಡಿರುವುದರಿಂದ ಈ ಪೀಠವು 'ಜ್ವಾಲಾಪೀಠ', ಉರಿಗದ್ದುಗೆ ಎಂಬ ಹೆಸರು ಪಡೆದಿದೆ.

ಹಿರಿಯರು ಹೇಳುವಂತೆ ಜ್ವಾಲಾಪೀಠದ ಮೇಲೆ ಸಾಸಿವೆ ಎಸೆದರೆ ಕ್ಷಣದಲ್ಲೇ ಸಿಡಿಯುತ್ತಿತ್ತು ಎಂದು ಹೇಳುತ್ತಾರೆ. ಈ ಜ್ವಾಲಾಪೀಠವೂ ಈಶ್ವರನ ತೇಜೋ ಅಂಶಗಳಿಂದ ಕೂಡಿರುವ ಕಾರಣದಿಂದ ಇದು ಅಗ್ನಿಮಯವಾದುದ್ದಾಗಿದೆ.

ಶ್ರೀ ಗುರು ಗೋರಖನಾಥರು ಶ್ರೀ ಕ್ಷೇತ್ರಕ್ಕೆ ಬಂದು ಪರಶಿವನು ತಪಸ್ಸು ಮಾಡಿದ ಜ್ವಾಲಾಪೀಠದ ಸ್ಥಳದಲ್ಲಿಯೇ ಕುಳಿತು ತಪಸ್ಸು ಮಾಡಿ ಸಿದ್ಧಿಯನ್ನು ಪಡೆದರು ಎಂಬ ಇತಿಹಾಸ ಇದೆ. ಅಂದಿನಿಂದಲೂ ಶ್ರೀ ಕ್ಷೇತ್ರ ನಾಥ ಪಂಥದ ಪ್ರಮುಖ ಪೀಠವಾಗಿ ಹೆಗ್ಗಳಿಕೆಯನ್ನು ಗಳಿಸಿದೆ.

ಈ ಜ್ವಾಲಾಪೀಠವನ್ನು ಪೀಠಾಧ್ಯಕ್ಷರಾದ ಜಗದ್ಗುರು ಶ್ರೀಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ನವರಾತ್ರಿಯಲ್ಲಿ ಮಹಾನವಮಿಯ ಆಯುಧ ಪೂಜೆ, ಮಹಾಶಿವರಾತ್ರಿ ಮತ್ತು ಹೋಳಿ ಹುಣ್ಣಿಮೆಯಂದು ನಡೆಯುವ ರಥೋತ್ಸವದ ಹಿಂದಿನ ದಿನದಂದು ವರ್ಷದಲ್ಲಿ 3 ಬಾರಿಯಷ್ಟೇ ಶ್ರೀಗಳು ಉರಿಗದ್ದುಗೆಯನ್ನು ಅಲಂಕರಿಸುತ್ತಾರೆ. ಪೀಠಸ್ಥರಾದವರನ್ನು ದರ್ಶನ ಮಾಡಿದರೆ ಫಲಾಫಲಗಳು ಲಭಿಸುತ್ತವೆ, ಮಾನವ ಜನ್ಮ ಪಡೆದುದ್ದಕ್ಕೆ ಸಾರ್ಥಕವಾಯಿತು ಎಂದು ಜ್ವಾಲಾಪೀಠದಲ್ಲಿ ಆರೋಹಣರಾಗಿರುವ ಗುರುಗಳ ದರ್ಶನವನ್ನು ಮಾಡಿದರೆ ಕೈಲಾಸದಲ್ಲಿ ಪರಶಿವನ ದರ್ಶನ ಮಾಡಿದಷ್ಟೇ ಪುಣ್ಯ ಲಭಿಸುತ್ತದೆ ಎಂದು ನಂಬಿದ್ದಾರೆ ಅಸಂಖ್ಯಾತ ಭಕ್ತ ಸಮೂಹ. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Bengaluru South Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

॥ ಜೈ ಶ್ರೀ ಗುರುದೇವ್ ॥



**ಆದಿಚುಂಚನಗಿರಿ ವಿಶ್ವವಿದ್ಯಾಲಯ**

**ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ**

**ಆದಿಚುಂಚನಗಿರಿ ಆಸ್ಪತ್ರೆ ಟ್ರಸ್ಟ್ (ರಿ).,**

**ಆದಿಚುಂಚನಗಿರಿ ಆಸ್ಪತ್ರೆ**



ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಗಳವರ ಆಶೀರ್ವಾದಗಳೊಂದಿಗೆ

ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದೊಂದಿಗೆ

**ಕೀಲು ಮತ್ತು ಮೂಳೆ ವಿಭಾಗ** ಮತ್ತು

**ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯದ ಹಳೇ ವಿದ್ಯಾರ್ಥಿಗಳ**

ಸಹಯೋಗದಲ್ಲಿ

# ಉಚಿತ ಕೃತಕ ಮೊಣಕಾಲು ಕೀಲು ಜೋಡಣಾ ಶಿಬಿರ

**ದಿನಾಂಕ: 18.01.2026 ಭಾನುವಾರ ರಿಂದ 20.02.2026 ಶುಕ್ರವಾರದವರೆಗೆ**

**ಸ್ಥಳ: ಆದಿಚುಂಚನಗಿರಿ ಆಸ್ಪತ್ರೆ ಬಿ.ಜಿ.ನಗರ**
**ನಾಗಮಂಗಲ ತಾ॥, ಮಂಡ್ಯ ಜಿಲ್ಲೆ**



## ವಿಶೇಷ ಸೂಚನೆ

**ಮಂಡಿ ನೋವಿನಿಂದ ಬಳಲುತ್ತಿರುವರು ತಮ್ಮ BPL ಕಾರ್ಡ್ ಅಥವಾ ಯಶಸ್ವಿನಿ ಕಾರ್ಡ್‌ನೊಂದಿಗೆ ಹೆಸರು ನೋಂದಾಯಿಸಿ ಶಿಬಿರದ ಪ್ರಯೋಜನ ಪಡೆಯಲು ಕೋರಲಾಗಿದೆ.**

ನೊಂದಣಿಗಾಗಿ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

**+91 9448581730 | +91 9964142863 | +91 9632834071 | +91 7829225323**

Registered with Registrar of News Papers for India No.KARKAN/2018/76081, **Sampreethi Samruddhi,** Feb.- 2026.
License to post without prepayment. License No.**KA/BG/CNA/119/2025-2027,**
Date of publication: **28.01.2026.** Posted at **Magadi Sub Post Office-562120** on **29**th of every month



**ಧ್ಯಾನಾಸಕ್ತರಾಗಿ, ತಪೋನಿರತರಾಗಿರುವ ಶಿವ ತಪಗೈದ ಜ್ವಾಲಾಪೀಠದಲ್ಲಿ ಚುಂಚ ಶ್ರೀಗಳು**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120